2019 ಕ.ತೀ.ವ 1717

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

## ಶ್ರೀ ಎಸ್.ಎಂ. ರಾಜಗೋಪಾಲ್ –ವಿರುದ್ಧ– ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಕರ್ನಾಟಕ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಗಳ ಪರಭಾರೆ ನಿಷೇಧ) ಅಧಿನಿಯಮ, 1978ರ 5ನೇ ಪ್ರಕರಣ.

ಈ ನ್ಯಾಯಾಲಯದ ಮುಂದಿರುವಂಥ ಅರ್ಜಿದಾರರು ಸರ್ಷಿಯೋರರಿ ರಿಟ್‌ನ ಹೊರಡಿಸುವಂತೆ ಈ ನ್ಯಾಯಾಲಯವನ್ನು ಕೋರಿರುತ್ತಾರೆ ಹಾಗೂ 1ನೇ ಪ್ರತ್ಯರ್ಜಿದಾರನು ಹೊರಡಿಸಿದ ಅನುಬಂಧ–ಎ ಮೇರೆಗಿನ ದಿನಾಂಕ: 9.7.2015ರಂದಿನ ಆದೇಶವನ್ನು ಅಲ್ಲದೆ ಕರ್ನಾಟಕ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳು (ಕೆಲವು ಭೂಮಿಗಳ ಪರಭಾರೆ ನಿಷೇಧ) ಅಧಿನಿಯಮ, 1978 (ಸಂಕ್ಷಿಪ್ತವಾಗಿ ಇನ್ನು ಮುಂದೆ 'ಪಿಟಿಸಿಎಲ್ ಅಧಿನಿಯಮ' ಎಂದು ಕರೆಯಲಾಗಿದೆ) 4(1)ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿನ ದಿನಾಂಕ: 27.2.1988ರಂದಿನ ಮಾರಾಟದ ಬಲದಿಂದ ಪ್ರಶ್ನಿತ ಜಮೀನಿನ ಮೇಲೆ ಯಾವುದೇ ಹಕ್ಕು, ಸ್ವಾಮ್ಯ ಹಾಗೂ ಹಿತಾಸಕ್ತಿಯನ್ನು ಇಲ್ಲಿನ ಅರ್ಜಿದಾರರು ಹೊಂದಿರುವುದಿಲ್ಲವೆಂದು ಎರಡನೇ ಪ್ರತ್ಯರ್ಜಿದಾರ ಉಪವಿಭಾಗಾಧಿಕಾರಿಯು ಹೊರಡಿಸಿದ ಅನುಬಂಧ – ಬಿ ಮೇರೆಗಿನ ದಿನಾಂಕ: 1.4.2013ರಂದಿನ ಆದೇಶವನ್ನು ರದ್ದುಪಡಿಸಲು ಈ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

*ರಿಟ್ ಅರ್ಜಿ ಸಂಖ್ಯೆ: 30614/2015 (ಎಸ್.ಸಿ–ಎಸ್.ಟಿ), ದಿನಾಂಕ 4ನೇ ಜೂನ್, 2018.

ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ: ಪ್ರತ್ಯರ್ಜಿದಾರ ಸಂಖ್ಯೆ: 3, ಮೂಲದಲ್ಲಿ ಅನುದಾನ ಪಡೆದವನು ದಲಿತ ವರ್ಗಕ್ಕೆ ಸೇರಿದ್ದು, ಅವರು ದಿನಾಂಕ: 9.6.1934ರಂದು ಉಚಿತ ಅನುದಾನದ ಫಲಾನುಭವಿಯಾಗಿರುತ್ತಾನೆಂದು ಬೆಂಗಳೂರು ಉತ್ತರ ತಾಲೂಕಿನ ಜಾಲಾ ಹೋಬಳಿಯ ಸಾತನೂರು ಗ್ರಾಮದ ಸರ್ವೆ ಸಂಖ್ಯೆ: 109ರಲ್ಲಿ ಒಳಗೊಂಡಿರುವ ಜಮೀನಿನ ಪುನಃ ವಹಿಸಿಕೊಡುವಂತೆ ಕೋರಿ ಪಿಟಿಸಿಎಲ್ ಅಧಿನಿಯಮದ 5ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. 20 ವರ್ಷಗಳ ಕಾಲ ಪರಭಾರೆ ಮಾಡದಿರುವ ಖಂಡವನ್ನು 1956ರಲ್ಲಿ ನೀಡಿದಂಥ ಸಾಗುವಳಿ ಚೀಟಿಯಲ್ಲಿ ಸೇರಿಸಲಾಗಿತ್ತು. ಅನುದಾನ ಪಡೆದವನು ಇಲ್ಲಿನ ಅರ್ಜಿದಾರನ ಸ್ವಾಮ್ಯದಲ್ಲಿನ ಪೂರ್ವಾಧಿಕಾರಿಗಳ ಹೆಸರಿನಲ್ಲಿ ದಿನಾಂಕ: 2.9.1971ರಂದು ಜಮೀನನ್ನು ಪರಭಾರೆ ಮಾಡಿರುತ್ತಾನೆ. ಆ ತರುವಾಯ, 1973ನೇ ವರ್ಷದ ಎರಡನೇ ಮಾರಾಟ ನಡೆದಿರುತ್ತದೆ ಹಾಗೂ ಜಮೀನು ದಿನಾಂಕ: 27.2.1988ರ ಕ್ರಯಪತ್ರದಡಿಯಲ್ಲಿ ಅರ್ಜಿದಾರರ ಕೈಗೆ ಬಂದಿರುತ್ತದೆ. ಯಾವುದೇ ಮಾರಾಟ ವ್ಯವಹರಣೆಗಳನ್ನು ಅನುದಾನ ಪಡೆದವನಾಗಲೀ ಅಥವಾ ಆತನ ಕಾನೂನುಸಮ್ಮತ ವಾರಸುದಾರರಾಗಲೀ ಯಾವುದೇ ಇತರ ವ್ಯವಹರಣೆಗಳಲ್ಲಿ ಪ್ರಶ್ನಿಸಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿನ ಮೊದಲ ಕ್ರಮವನ್ನು 2011ನೇ ವರ್ಷದಲ್ಲಿ ಆರಂಭಿಸಲಾಗಿರುತ್ತದೆಂಬುದು ಒಪ್ಪಿತ ವಿಷಯವಾಗಿರುತ್ತದೆ.

ಅಧಿನಿಯುಮದಡಿಯಲ್ಲಿ ಅಗತ್ಯಪಡಿಸಿದಂತೆ ರಾಜ್ಯ ಸರ್ಕಾರದಿಂದ ಪೂರ್ವಾನುಮತಿಯಿಲ್ಲದೆ ಪ್ರಶ್ನಿತ ಜಮೀನನ್ನು ಅರ್ಜಿದಾರರು ಖರೀದಿಸಿರುತ್ತಾರೆಂದು ಮೊದಲನೇ ಪ್ರತ್ಯರ್ಜಿದಾರರು ಅಭಿಪ್ರಾಯಪಟ್ಟು ದೋಷವೆಸಗಿರುತ್ತಾರೆಂದು ಅರ್ಜಿದಾರರ ಪರ ವಾದಿಸಲಾಗಿರುತ್ತದೆ. ಅರ್ಜಿದಾರರು ಪ್ರಶ್ನಿತ ಜಮೀನಿನ 3ನೇ ಖರೀದಿದಾರರಾಗಿರುತ್ತಾರೆಂದು ವಾದಿಸಲಾಗಿರುತ್ತದೆ. ಅದರಂತೆ, ಅಲ್ಲಿ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಮುಂದುವರೆದು, ಅರ್ಜಿದಾರರ ಪರ ಮಾನ್ಯ ವಕೀಲರು, ಮೊದಲನೆ ಪ್ರತ್ಯರ್ಜಿದಾರನು, ಅರ್ಜಿದಾರನಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡದೆ ಪ್ರಶ್ನಿತ ಆದೇಶವನ್ನು ಹೊರಡಿಸಲು ಮುಂದುವರೆಯಲಾಗಿರುತ್ತದೆಂದೂ ಅದರಂತೆ, ಈ ಪ್ರಕ್ರಿಯೆಯಿಂದ ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಯಾಗಿರುತ್ತದೆಂದು ವಾದಿಸಿರುತ್ತಾರೆ.

ಮುಂದುವರೆದು, ಕಾನೂನಿನಲ್ಲಿ ಸಂಪೂರ್ಣವಾಗಿ ಅಸಮರ್ಥನೀಯವಾದಂಥ ಮೊದಲ ಪ್ರತ್ಯರ್ಜಿದಾರನ ಆದೇಶವನ್ನು ದೃಢೀಕರಿಸಿ ಅನುಬಂಧ – ಬಿ ಯಲ್ಲಿ ಪ್ರಶ್ನಿತ ಆದೇಶವನ್ನು ಹೊರಡಿಸಲಾಗಿರುತ್ತದೆಂದು ವಾದಿಸಲಾಗಿರುತ್ತದೆ.

ವಿಳಂಬ ಹಾಗೂ ಉಪೇಕ್ಷೆಗಳ ಕುರಿತ ಕಾನೂನು, ಭೂ ಸ್ವಾಧೀನದ ವಿಷಯದಲ್ಲಿನ ಅಥವಾ ಸೇವಾ ಕಾನೂನಿನ ಕ್ಷೇತ್ರದಲ್ಲಿನ ತೀರ್ಪುಗಳ ಮೂಲಕ ಇತ್ಯರ್ಥಗೊಂಡಿರುತ್ತದೆ. ಸರ್ವೋಚ್ಚ ನ್ಯಾಯಾಲಯವನ್ನು ವಿವರಿಸಲಾಗದ ಒಟ್ಟಾರೆ ವಿಳಂಬವು, ಪಕ್ಷಕಾರನ ಹಕ್ಕುಳ್ಳ ನ್ಯಾಯಿಕ ನ್ಯಾಯ ನಿರ್ಣಯವನ್ನು ಕೋರಲು ಪಕ್ಷಕಾರರ ಹಕ್ಕಿಗೆ ಮಾರಣಾಂತಿಕ ಸ್ವರೂಪದ್ದಾಗಿರುತ್ತದೆಂದು ಅಭಿಪ್ರಾಯಪಡಲು ಕೋರಲಾಗಿರುತ್ತದೆ.

ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಪಡಿಸಿದ ಕಾನೂನನ್ನು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೂ ಕೂಡ ನೇರವಾಗಿ ಅನ್ವಯಿಸಲಾಗಿರುತ್ತದೆ. ಅನುದಾನವು 1934ನೇ ವರ್ಷದಾಗಿದ್ದು, ಮೊದಲ ಕ್ರಯಪತ್ರವನ್ನು ದಿನಾಂಕ: 2.9.1971ರಂದು ಜಾರಿಗೊಳಿಸಿದ್ದು, ಎರಡನೇ ಕ್ರಯವನ್ನು 1973ರಲ್ಲಿಯೂ ಮಾಡಿದ್ದು, ಕೊನೆಯ ಮಾರಾಟ ವ್ಯವಹರಣೆಯನ್ನು ದಿನಾಂಕ: 27.2.1988ರಂದು ಪರಿಣಾಮಕಾರಿಯಾಗುವಂತೆ ಮಾಡಲಾಗಿರುತ್ತದೆ. ಇದರ ಪರಿಣಾಮವಾಗಿ, ಮೂರನೇ ಪಕ್ಷಕಾರನ ಹಕ್ಕುಗಳನ್ನು ಸೃಜಿಸಬೇಕೆಂದಾಗಿರುತ್ತದೆ. ಅಲ್ಲದೆ ಪಕ್ಷಕಾರರು ಇತ್ಯರ್ಥಗೊಂಡ ಸ್ಥಿತಿಯಲ್ಲಿರುತ್ತಾರೆ.

ಪಿಟಿಸಿಎಲ್ ಅಧಿನಿಯಮವು ದಿನಾಂಕ: 1.1.1979ರಿಂದ ಪರಿಣಾಮಕಾರಿಯಾಗಿರುವಂತೆ ಜಾರಿಯಲ್ಲಿರುವುದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅನುದಾನ ಪಡೆದವನಾಗಲೀ ಅಥವಾ ಆತನ ಕಾನೂನು ಸಮ್ಮತ ವಾರಸುದಾರನಾಗಲೀ 5ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಅವರಲ್ಲಿ ನಿಹಿತವಾದ ಹಕ್ಕನ್ನು ಸುಸ್ಥಾಪಿಸಲು ಉತ್ಸುಕರಾಗಿರುತ್ತಾರೆಂದು ಭಾವಿಸಿ, ಅವರನ್ನು ಸದೃಢವಾದ ರೀತಿಯಲ್ಲಿ ವರ್ತಿಸಲು ಅಗತ್ಯಪಡಿಸಲಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ದೃಢತೆಯು ಶೋಚನೀಯ ಪ್ರಮಾಣದ ಕೊರತೆಯನ್ನು ಹೊಂದಿರುತ್ತದೆ. ಪಕ್ಷಕಾರನು 32 ವರ್ಷಗಳ ತರುವಾಯ ಎಚ್ಚರಗೊಂಡು, ಕಾನೂನು ಸಮರವನ್ನು ಆರಂಭಿಸಿರುತ್ತಾರೆ. ಅತಿಯಾದ ಹಾಗೂ ಮಿತಿಮೀರಿದ ವಿಳಂಬಕ್ಕೆ ಸಂಬಂಧಿಸಿದಂತೆ ವಿವರಣೆ ಕೋರಲು ನಿರುಪಾಧಿಕವಾಗಿ

ಯಾವುದೇ ಸಮರ್ಥನೀಯ ಕಾರಣವೇ ಇರುವುದಿಲ್ಲ. ಹಾಗಾಗಿ, ಈ ಆಧಾರದ ಮೇಲೂ ಸಹ, ರಿಟ್ ಅರ್ಜಿಯನ್ನು ಅಂಗೀಕರಿಸಬೇಕಾಗಿರುತ್ತದೆ.

ಮೇಲಿನ ಚರ್ಚೆಯ ಹಿನ್ನೆಲೆಯಲ್ಲೂ, ಈ ನ್ಯಾಯಾಲಯವು, ಪ್ರಸ್ತುತ ರಿಟ್ ಅರ್ಜಿಯಲ್ಲಿರುವ ಗುಣಾರ್ಹತೆಗಳನ್ನು ಕಂಡುಕೊಂಡಿರುತ್ತದೆ. ತದನುಸಾರವಾಗಿ, ಇದನ್ನು ಅಂಗೀಕರಿಸಲಾಗಿರುತ್ತದೆ. 1 ಮತ್ತು 2ನೇ ಪ್ರತ್ಯರ್ಜಿದಾರರು ಹೊರಡಿಸಿದ ಆದೇಶಗಳಾದ ಅನುಬಂಧ–ಎ ಹಾಗೂ ಬಿ ಗಳನ್ನು ರದ್ದುಪಡಿಸಲಾಗಿರುತ್ತದೆ.

ವ್ಯಾಜ್ಯದಲ್ಲಿ ಒಳಗೊಂಡಿರುವ ಕಾನೂನು ಹಾಗೂ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. 2018 (1) ಕೆಎಆರ್ ಎಲ್.ಆರ್. 5(ಎಸ್‌ಸಿ)*
*ನೆಕ್ಕಂಟಿ ರಾಮ ಲಕ್ಷ್ಮಿ –ವಿರುದ್ಧ–*
*ಕರ್ನಾಟಕ ಸರ್ಕಾರ ಹಾಗೂ ಮತ್ತೊಬ್ಬರು (ಉಲ್ಲೇ) 5*

*2. 2017 (6) ಎಸ್‌ಸಿಸಿ 459*
*ಭೇಡಿ ಲಾಲ್ ಯಾದವ್ ಹಾಗೂ ಇತರರು –ವಿರುದ್ಧ–*
*ಹರಿ ಕಿಶೋರ್ ಯಾದವ್ (ಮೃತ) ಅವರ ಕಾನೂನು*
*ಸಮ್ಮತ ವಾರಸುದಾರರು ಹಾಗೂ ಇತರರು (ಉಲ್ಲೇ) 6*

*3. (1984) 3 ಎಸ್‌ಸಿಸಿ 301*
*ಮಂಚೇಗೌಡ –ವಿರುದ್ಧ– ಕರ್ನಾಟಕ ಸರ್ಕಾರ (ಉಲ್ಲೇ) 9*

*4. 1984 (1) ಎಸ್‌ಸಿಸಿ 125*
*ಮಾನ್‌ಸಾರಾಮ್ –ವಿರುದ್ಧ–*
*ಎಸ್.ಪಿ. ಪಾಠಕ್ ಹಾಗೂ ಇತರರು (ಉಲ್ಲೇ) 12*

ಅರ್ಜಿದಾರರ ಪರ : ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ, ವಕೀಲರು.
1ನೇ ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಸಾವಿತ್ರಮ್ಮ, ಹೆಚ್.ಸಿ.ಜಿ.ಪಿ.
3ನೇ ಪ್ರತ್ಯರ್ಜಿದಾರರ ಪರ : ಎನ್. ಸೊಣ್ಣೇಗೌಡ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಜಿ. ನರೇಂದರ್:**

ಅರ್ಜಿದಾರರ ಪರ ಮಾನ್ಯ ವಕೀಲರು, ಪ್ರತ್ಯರ್ಜಿದಾರ – ರಾಜ್ಯ ಪರ ಮಾನ್ಯ ಎಚ್.ಸಿ.ಜಿ.ಪಿ. ಹಾಗೂ ಪ್ರತ್ಯರ್ಜಿದಾರ ಸಂಖ್ಯೆ:3ರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಯಿತು.

2. ಈ ನ್ಯಾಯಾಲಯದ ಮುಂದಿರುವಂಥ ಅರ್ಜಿದಾರರು ಸರ್ಷಿಯೋರರಿ ರಿಟ್‌ನ ಹೊರಡಿಸುವಂತೆ ಈ ನ್ಯಾಯಾಲಯವನ್ನು ಕೋರಿರುತ್ತಾರೆ ಹಾಗೂ 1ನೇ ಪ್ರತ್ಯರ್ಜಿದಾರನು ಹೊರಡಿಸಿದ ಅನುಬಂಧ–ಎ ಮೇರೆಗಿನ ದಿನಾಂಕ: 9.7.2015ರಂದಿನ ಆದೇಶವನ್ನು ಅಲ್ಲದೆ ಕರ್ನಾಟಕ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳು (ಕೆಲವು ಭೂಮಿಗಳ ಪರಭಾರೆ ನಿಷೇಧ) ಅಧಿನಿಯಮ, 1978 (ಸಂಕ್ಷಿಪ್ತವಾಗಿ ಇನ್ನು ಮುಂದೆ 'ಪಿಟಿಸಿಎಲ್ ಅಧಿನಿಯಮ' ಎಂದು ಕರೆಯಲಾಗಿದೆ) 4(1)ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿನ ದಿನಾಂಕ: 27.2.1988ರಂದಿನ ಮಾರಾಟದ ಬಲದಿಂದ ಪ್ರಶ್ನಿತ ಜಮೀನಿನ ಮೇಲೆ ಯಾವುದೇ ಹಕ್ಕು, ಸ್ವಾಮ್ಯ ಹಾಗೂ ಹಿತಾಸಕ್ತಿಯನ್ನು ಇಲ್ಲಿನ ಅರ್ಜಿದಾರರು ಹೊಂದಿರುವುದಿಲ್ಲವೆಂದು ಎರಡನೇ ಪ್ರತ್ಯರ್ಜಿದಾರ ಉಪವಿಭಾಗಾಧಿಕಾರಿಯು ಹೊರಡಿಸಿದ ಅನುಬಂಧ – ಬಿ ಮೇರೆಗಿನ ದಿನಾಂಕ: 1.4.2013ರಂದಿನ ಆದೇಶವನ್ನು ರದ್ದುಪಡಿಸಲು ಈ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

3. ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ: ಪ್ರತ್ಯರ್ಜಿದಾರ ಸಂಖ್ಯೆ: 3, ಮೂಲದಲ್ಲಿ ಅನುದಾನ ಪಡೆದವನು ದಲಿತ ವರ್ಗಕ್ಕೆ ಸೇರಿದ್ದು,

ಅವರು ದಿನಾಂಕ: 9.6.1934ರಂದು ಉಚಿತ ಅನುದಾನದ ಫಲಾನುಭವಿ ಯಾಗಿರುತ್ತಾನೆಂದು ಬೆಂಗಳೂರು ಉತ್ತರ ತಾಲೂಕಿನ ಜಾಲಾ ಹೋಬಳಿಯ ಸಾತನೂರು ಗ್ರಾಮದ ಸರ್ವೆ ಸಂಖ್ಯೆ: 109ರಲ್ಲಿ ಒಳಗೊಂಡಿರುವ ಜಮೀನಿನ ಪುನಃ ವಹಿಸಿಕೊಡುವಂತೆ ಕೋರಿ ಪಿಟಿಸಿಎಲ್ ಅಧಿನಿಯಮದ 5ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. 20 ವರ್ಷಗಳ ಕಾಲ ಪರಭಾರೆ ಮಾಡದಿರುವ ಖಂಡವನ್ನು 1956ರಲ್ಲಿ ನೀಡಿದಂಥ ಸಾಗುವಳಿ ಚೀಟಿಯಲ್ಲಿ ಸೇರಿಸಲಾಗಿತ್ತು. ಅನುದಾನ ಪಡೆದವನು ಇಲ್ಲಿನ ಅರ್ಜಿದಾರನ ಸ್ವಾಮ್ಯದಲ್ಲಿನ ಪೂರ್ವಾಧಿಕಾರಿಗಳ ಹೆಸರಿನಲ್ಲಿ ದಿನಾಂಕ: 2.9.1971ರಂದು ಜಮೀನನ್ನು ಪರಭಾರೆ ಮಾಡಿರುತ್ತಾನೆ. ಆ ತರುವಾಯ, 1973ನೇ ವರ್ಷದ ಎರಡನೇ ಮಾರಾಟ ನಡೆದಿರುತ್ತದೆ ಹಾಗೂ ಜಮೀನು ದಿನಾಂಕ: 27.2.1988ರ ಕ್ರಯಪತ್ರದಡಿಯಲ್ಲಿ ಅರ್ಜಿದಾರರ ಕೈಗೆ ಬಂದಿರುತ್ತದೆ. ಯಾವುದೇ ಮಾರಾಟ ವ್ಯವಹರಣೆಗಳನ್ನು ಅನುದಾನ ಪಡೆದವನಾಗಲೀ ಅಥವಾ ಆತನ ಕಾನೂನುಸಮ್ಮತ ವಾರಸುದಾರರಾಗಲೀ ಯಾವುದೇ ಇತರ ವ್ಯವಹರಣೆಗಳಲ್ಲಿ ಪ್ರಶ್ನಿಸಿರುವುದಿಲ್ಲ ಹಾಗೂ ಈ ಸಂಬಂಧದಲ್ಲಿನ ಮೊದಲ ಕ್ರಮವನ್ನು 2011ನೇ ವರ್ಷದಲ್ಲಿ ಆರಂಭಿಸಲಾಗಿರುತ್ತದೆಂಬುದು ಒಪ್ಪಿತ ವಿಷಯವಾಗಿರುತ್ತದೆ.

4. ಅಧಿನಿಯಮದಡಿಯಲ್ಲಿ ಅಗತ್ಯಪಡಿಸಿದಂತೆ ರಾಜ್ಯ ಸರ್ಕಾರದಿಂದ ಪೂರ್ವಾನುಮತಿಯಿಲ್ಲದೆ ಪ್ರಶ್ನಿತ ಜಮೀನನ್ನು ಅರ್ಜಿದಾರರು ಖರೀದಿಸಿರುತ್ತಾರೆಂದು ಮೊದಲನೇ ಪ್ರತ್ಯರ್ಜಿದಾರರು ಅಭಿಪ್ರಾಯಪಟ್ಟು ದೋಷವೆಸಗಿರುತ್ತಾರೆಂದು ಅರ್ಜಿದಾರರ ಪರ ವಾದಿಸಲಾಗಿರುತ್ತದೆ. ಅರ್ಜಿದಾರರು ಪ್ರಶ್ನಿತ ಜಮೀನಿನ 3ನೇ ಖರೀದಿದಾರರಾಗಿರುತ್ತಾರೆಂದು ವಾದಿಸಲಾಗಿರುತ್ತದೆ. ಅದರಂತೆ, ಅಲ್ಲಿ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ. ಮುಂದುವರೆದು, ಅರ್ಜಿದಾರರ ಪರ ಮಾನ್ಯ ವಕೀಲರು, ಮೊದಲನೆ ಪ್ರತ್ಯರ್ಜಿದಾರನು, ಅರ್ಜಿದಾರನಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡದೆ ಪ್ರಶ್ನಿತ ಆದೇಶವನ್ನು ಹೊರಡಿಸಲು ಮುಂದುವರೆಯಲಾಗಿರುತ್ತದೆಂದೂ ಅದರಂತೆ, ಈ ಪ್ರಕ್ರಿಯೆಯಿಂದ ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಯಾಗಿರುತ್ತದೆಂದು ವಾದಿಸಿರುತ್ತಾರೆ.

ಮುಂದುವರೆದು, ಕಾನೂನಿನಲ್ಲಿ ಸಂಪೂರ್ಣವಾಗಿ ಅಸಮರ್ಥನೀಯವಾದಂಥ ಮೊದಲ ಪ್ರತ್ಯರ್ಜಿದಾರನ ಆದೇಶವನ್ನು ದೃಢೀಕರಿಸಿ ಅನುಬಂಧ – ಬಿ ಯಲ್ಲಿ ಪ್ರಶ್ನಿತ ಆದೇಶವನ್ನು ಹೊರಡಿಸಲಾಗಿರುತ್ತದೆಂದು ವಾದಿಸಲಾಗಿರುತ್ತದೆ.

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ***ನೆಕ್ಕಂಟಿ ರಾಮ ಲಕ್ಷ್ಮಿ –ವಿರುದ್ಧ– ಕರ್ನಾಟಕ ಸರ್ಕಾರ ಹಾಗೂ ಮತ್ತೊಬ್ಬರು***[1] ಪ್ರಕರಣದಲ್ಲಿ ನೀಡಿದ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ, ಅದರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

> *“8. ಆದಾಗ್ಯೂ, ಅಧಿನಿಯಮದ 4ನೇ ಪ್ರಕರಣದಡಿಯಲ್ಲಿ ಶೂನ್ಯವೆಂದು ವರ್ಗಾವಣೆಯನ್ನು ರದ್ದುಗೊಳಿಸುವುದಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲು ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯನ್ನು ಸಮರ್ಥಗೊಳಿಸುವಂಥ ಅಧಿನಿಯಮದ 5ನೇ ಪ್ರಕರಣದ ನಿಬಂಧನೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆಯು ಉದ್ಭವಿಸಿರುತ್ತದೆ. ಈ ಪ್ರಕರಣವು ಅರ್ಜಿಯನ್ನು ಇಷ್ಟು ಅವಧಿಯೊಳಗೆ ಸಲ್ಲಿಸಬೇಕೆಂದು ಗೊತ್ತುಪಡಿಸಿರುವುದಿಲ್ಲ. ಈ ನ್ಯಾಯಾಲಯವು, ಛೆಡಿ ಲಾಲ್ ಯಾದವ್ ಹಾಗೂ ಇತರರು –ವಿರುದ್ಧ– ಹರಿ ಕಿಶೋರ್ ಯಾದವ್ (ಡಿ) ಅವರ ಕಾನೂನು ಸಮ್ಮತ ವಾರಸುದಾರರು ಹಾಗೂ ಇತರರು 2017(6) ಸ್ಕೇಲ್ 459 ಅಲ್ಲದೆ ನಿಂಗಪ್ಪ –ವಿರುದ್ಧ – ಜಿಲ್ಲಾಧಿಕಾರಿ ಹಾಗೂ ಇತರರು (ಸಿ.ಎ.ಸಂಖ್ಯೆ: 2007ರ 3131, ದಿನಾಂಕ: 14.07.2011ರಂದು ನಿರ್ಧಾರವಾದದ್ದು) ಪ್ರಕರಣಗಳಲ್ಲಿ, ಕಾಲ ಪರಿಮಿತಿಯ ಅವಧಿಗೆ ಸಂಬಂಧಿಸಿದಂತೆ ಪರಿನಿಯಮವನ್ನು ಉಪಬಂಧಿಸಿದರೆ, ಪರಿನಿಯಮಗಳ ಉಪಬಂಧಗಳನ್ನು ಸೂಕ್ತ ಸಮಯದೊಳಗೆ*

1. 2018(1) ಕೆಎಆರ್ ಎಲ್.ಆರ್. 5(ಎಸ್‌ಸಿ)

ಅನ್ವಯಿಸಲೇಬೇಕೆಂಬುದು ಕಾನೂನಿನಲ್ಲಿ ಇತ್ಯರ್ಥಗೊಂಡಿದೆಯೆಂದು ಪುನರುಚ್ಚರಿಸಿರುತ್ತದೆ. ಪಕ್ಷಕಾರರು ಅರ್ಜಿ ಸಲ್ಲಿಸಿದ್ದರಿಂದಾಗಲೀ ಅಥವಾ ಖುದ್ದಾಗಿಯಾಗಲೀ ಕ್ರಮವನ್ನು ಕೈಗೊಳ್ಳುವುದಾದರೆ, ಯುಕ್ತ ಸಮಯದೊಳಗೇ ಕೈಗೊಳ್ಳಬೇಕಾಗಿರುತ್ತದೆ. ಇದು, ಪಕ್ಷಕಾರರ ಅರ್ಜಿಯ ಮೇಲಾಗಲೀ ಅಥವಾ ಖುದ್ದಾಗಿಯಾಗಲಿ ಯುಕ್ತ ಕಾಲದೊಳಗೆ ಕ್ರಮ ಕೈಗೊಳ್ಳಲೇಬೇಕೆಂದು ಅಭಿಪ್ರಾಯಪಟ್ಟಿರುತ್ತದೆ. 1ನೇ ಜನವರಿ 1939 ರಿಂದ 31ನೇ ಡಿಸೆಂಬರ್ 1950ರವರೆಗೆ ಬಾಡಿಗೆಯ ಬಾಕಿಗಳಿಗಾಗಿ ಅಥವಾ ಜಮೀನಿನ ಬಾಕಿಗಳಿಗೆ ಹೊರದಬ್ಬಿದಂಥ ರೈತರಿಗೆ ಕೆಲವು ಜಮೀನುಗಳನ್ನು ವಾಪಸ್ಸು ಕೊಡುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಿದಂಥ ಸದೃಶ ಅಧಿನಿಯಮದ ಉಪಬಂಧಗಳಡಿಯಲ್ಲಿ ಆ ಕ್ರಮವು ಉದ್ಭವವಾಗಿರುತ್ತದೆ. ಕೋಸಿನದಿಯಲ್ಲಿನ ಪ್ರವಾಹದಿಂದಾಗಿ ಆ ಜಮೀನಿನಲ್ಲಿ ಕೃಷಿ ಮಾಡಲು ಸಾಧ್ಯವೇ ಆಗದಂಥ ರೈತರಿಗೆ ಈ ಪರಿಹಾರವನ್ನು ನೀಡಲಾಗಿರುತ್ತದೆ. ವಾಪಸಾತಿಗಾಗಿನ ಅರ್ಜಿಯನ್ನು 24 ವರ್ಷಗಳ ತರುವಾಯ ಸಲ್ಲಿಸಿದ್ದು, ಅದನ್ನೂ ಅಂಗೀಕರಿಸಲಾಗಿರುತ್ತದೆ. ಆ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು, ಹಾಗೆ ಮಾಡುವುದು ಯುಕ್ತವಲ್ಲವೆಂಬುದನ್ನು ಎತ್ತಿ ಹಿಡಿದಿದೆ. ಪ್ರತ್ಯರ್ಜಿದಾರ – ರಾಜಪ್ಪ ಯುಕ್ತ ಕಾರಣವಿಲ್ಲದೆ ದೀರ್ಘ ಅವಧಿಯ ತರುವಾಯ ಜಮೀನನ್ನು ವಾಪಸ್ಸು ಮಾಡಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಇದು ಆ ಆಧಾರದ ಮೇಲೆ ವಜಾ ಮಾಡಲು ಬದ್ಧವಾಗಿರುತ್ತದೆಂದು ಎತ್ತಿ ಹಿಡಿಯಲು ನಮಗೆ ಯಾವುದೇ ಮುಜುಗರವಿರುವುದಿಲ್ಲ. ತದನುಸಾರವಾಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳು, ಅಂದರೆ, ಆರ್. ರುದ್ರಪ್ಪ –ವಿರುದ್ಧ– ಜಿಲ್ಲಾಧಿಕಾರಿ, 2000(1) ಕರ್ನಾಟಕ ಲಾ ಜರ್ನಲ್ 523, ಮದ್ದೂರಪ್ಪ –ವಿರುದ್ಧ– ಕರ್ನಾಟಕ ಸರ್ಕಾರ, 2006 (4) ಕರ್ನಾಟಕ ಕಾನೂನು ಪತ್ರಿಕೆ, 303 ಹಾಗೂ ಜಿ. ಮಾರೇಗೌಡ –ವಿರುದ್ಧ– ಜಿಲ್ಲಾಧಿಕಾರಿ,

*ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಹಾಗೂ ಇತರರು 2000(2) ಕೆ.ಆರ್. ಎಲ್ ಜೆ.ಎಸ್ಎಚ್.ಎನ್. 4ಬಿ ಗಳಲ್ಲಿ ಅಧಿನಿಯಮದ 5ನೇ ಪ್ರಕರಣವು ಕಾಲ ಪರಿಮಿತಿಯನ್ನು ಉಪಬಂಧಿಸಿರುವುದಿಲ್ಲ. ಆದ್ದರಿಂದ, ಅರ್ಜಿಯನ್ನು ಯಾವುದೇ ಸಮಯದಲ್ಲಿಯಾದರೂ ಸಲ್ಲಿಸಬಹುದಾಗಿರುತ್ತದೆ. ತದನುಸಾರವಾಗಿ ಆದೇಶಿಸಲಾಗಿರುತ್ತದೆ.*

6. ಸದರಿ ನಿರ್ಣಯದಿಂದ, ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಶಾಸನಾತ್ಮಕ ಉಪಬಂಧಗಳನ್ನು ಅನ್ವಯಿಸಲು ಅಥವಾ ಪರಿನಿಯಮಗಳ ಮೂಲಕ ನಿಹಿತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಅತಿಯಾದ ಹಾಗೂ ಅತೀವವಾದ ವಿಳಂಬದ ಸಂಬಂಧದಲ್ಲಿ ಇತ್ಯರ್ಥಗೊಂಡ ಕಾನೂನನ್ನು ಹೊಂದಿರುತ್ತದೆ. ವಿವಾದಾಂಶವನ್ನು ಪರಿಶೀಲಿಸಿದ ಮೇಲೆ ಹಾಗೂ ***ಛೇಡಿ ಲಾಲ್ ಯಾದವ್ ಹಾಗೂ ಇತರರು –ವಿರುದ್ಧ– ಹರಿ ಕಿಶೋರ್ ಯಾದವ್ (ಮೃತ) ಅವರ ಕಾನೂನು ಸಮ್ಮತ ವಾರಸುದಾರರು ಹಾಗೂ ಇತರರು***[2] ಪ್ರಕರಣದಲ್ಲಿ ನೀಡಿದ ಇದರ ಮುಂಚಿನ ತೀರ್ಪನ್ನು ಅನುಸರಿಸಿ, ಅಧಿಕಾರವನ್ನು ಚಲಾಯಿಸಲು ಕಾಲಪರಿಮಿತಿಯ ಅವಧಿಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಲಾಗಿರುವುದಿಲ್ಲವೆಂದು, ತರುವಾಯ ಶಾಸನಾತ್ಮಕ ಉಪಬಂಧಗಳನ್ನು ಸೂಕ್ತ ಕಾಲಾವಧಿಯೊಳಗೆ ಅನ್ವಯಿಸಬೇಕೆಂದು ಪರಿನಿಯಮದ ಸಂಬಂಧದಲ್ಲಿ ಪುನರುಚ್ಚರಿಸಲಾಗಿರುತ್ತದೆ.

7. ಅಲ್ಲದೆ, ಮಾನ್ಯ ಎಚ್‌ಸಿಜಿಪಿಯವರು ಈ ನ್ಯಾಯಾಲಯದ, ಸಮನ್ವಯ ಪೀಠವು ಈ ಹಿಂದೆ ಉಲ್ಲೇಖಿಸಿದ ***ನೆಕ್ಕಂಟಿ ರಾಮಲಕ್ಷ್ಮಿ*** ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಉದಾಹರಿಸಿ ಮೂಲದಲ್ಲಿ ಅನುದಾನ ಪಡೆದ ಕಾನೂನು ಸಮ್ಮತ ವಾರಸುದಾರರು ಸಲ್ಲಿಸಿದ ರಿಟ್ ಅರ್ಜಿಗಳನ್ನು ವಜಾ ಮಾಡಲು ಕೋರಿದಂಥ ದಿನಾಂಕ: 20.02.2018ನೇ ದಿನಾಂಕದ ಆದೇಶದ ಮೂಲಕ ವಿಲೆಯಾದಂಥ ರಿಟ್ ಅರ್ಜಿ ಸಂಖ್ಯೆ: 6051/2008 (ಪ.ಜಾ./ಪ.ಪಂ.)

2. 2017(6) ಎಸ್‌ಸಿಸಿ 459

ಸಿ/ಡಬ್ಲ್ಯೂ ರಿಟ್ ಅರ್ಜಿ ಸಂಖ್ಯೆ: 1951/2016 (ಪ.ಜಾ./ಪ.ಪಂ.) ರಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪನ್ನು ಸಹ ದಾಖಲೆಯ ಮೇಲೆ ಮಂಡಿಸಿರುತ್ತಾರೆ.

8. ಪ್ರಸ್ತುತ ಪ್ರಕರಣದಲ್ಲಿ, 5ನೇ ಪ್ರಕರಣದ ಉಪಬಂಧಗಳನ್ನು 30 ವರ್ಷಗಳಿಗಿಂತ ಹೆಚ್ಚಿನ ಅವಧಿಯ ತರುವಾಯ ಅನ್ವಯಿಸಲಾಗಿರುತ್ತದೆ. ಕಲ್ಪನೆಯ ಯಾವುದೇ ವ್ಯಾಪ್ತಿಯ ಯುಕ್ತ ಅವಧಿಯಂತೆ ಪರಿಗಣಿಸಬೇಕಾಗಿರುತ್ತದೆ. ಈ ಸಂಬಂಧದಲ್ಲಿನ ಕಾನೂನು ಸಂಪೂರ್ಣವಾಗಿ ಇತ್ಯರ್ಥಗೊಂಡಿದ್ದು, ಪ್ರಕರಣದ ವಾಸ್ತವಾಂಶಗಳಿಗೆ ನೇರವಾಗಿ ಅನ್ವಯಿಸಲಾಗಿರುತ್ತದೆ.

9. ಅರ್ಜಿದಾರರ ಪರವಾದ ವಾದವು ಪರಿಗಣನೆಯ ಗುಣಾರ್ಹತೆಗಳನ್ನು ಹೊಂದಿರುತ್ತದೆ. ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು, ಈ ಹಿಂದೆ ಹೇಳಿದ ಪ್ರಕರಣದಲ್ಲಿ ವರದಿಯಾದ ನಿರ್ಣಯವನ್ನು, ***ಮಂಚೇಗೌಡ –ವಿರುದ್ಧ– ಕರ್ನಾಟಕ ಸರ್ಕಾರ***[3] ದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ ನೋಡಬೇಕಾಗಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ***ಮಂಚೇಗೌಡ*** ಪ್ರಕರಣದಲ್ಲಿ ಉದಾಹರಿಸಿದ ನಿರ್ಣಯವು ಇಬ್ಬರು ನ್ಯಾಯಾಧೀಶರುಗಳ ವಿಭಾಗೀಯ ಪೀಠದಿಂದ ನೀಡಿದುದಾಗಿರುವುದರಿಂದ ಮೂವರು ನ್ಯಾಯಾಧೀಶರುಗಳ ವಿಭಾಗೀಯ ಪೀಠದಿಂದ ಇತ್ಯರ್ಥಗೊಂಡಿರುತ್ತದೆ. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಮಂಚೇಗೌಡರ*** ಪ್ರಕರಣವನ್ನು ವಿಲೆ ಮಾಡುವಾಗ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸುವಲ್ಲಿನ ವಿಳಂಬಕ್ಕೆ ಸಂಬಂಧಿಸಿದ ವಿವಾದಾಂಶದೊಂದಿಗೆ ಅಭಿಗ್ರಹಿಸುವಂತಿಲ್ಲವೆಂಬ ವಾಸ್ತವಾಂಶದ ಹಿನ್ನೆಲೆಯಲ್ಲಿ ಈ ವಾದವನ್ನು ತಿರಸ್ಕರಿಸಬೇಕೆಂದು ಅಗತ್ಯಪಡಿಸುತ್ತದೆ. ಹಾಗಾಗಿ, ಸರ್ವೋಚ್ಚ ನ್ಯಾಯಾಲಯವು, ಸದರಿ ನಿರ್ಣಯವನ್ನು ಅಧಿನಿಯಮಿತಿಯು ಜಾರಿಗೆ ಬಂದ ತರುವಾಯ ಅಲ್ಪಾವಧಿಯಲ್ಲಿರುವುದರಿಂದ ಪರಿನಿಯಮದ ಉಪಬಂಧಗಳನ್ನು ಅನ್ವಯಿಸುವುಲ್ಲಿ ಅಕಾರಣಯುತವಾದ ವಿಳಂಬಕ್ಕೆ ಸಂಬಂಧಿಸಿದ ವಿವಾದಾಂಶವನ್ನು ಸರ್ವೋಚ್ಚ ನ್ಯಾಯಾಲಯವು ಪರಿಗಣಿಸುವುದಿಲ್ಲ.

3. (1984) 3 ಎಸ್‌ಸಿಸಿ 301

10. ಅಂಥ ಅನುದಾನವನ್ನು ಪುನಃ ವಾಪಸ್ಸು ಕೊಡುವುದಕ್ಕೆ ಸಂಬಂಧಿಸಿದಂತೆ ಯುಕ್ತ ಕಾನೂನು ಪ್ರಕ್ರಿಯೆಯ ಮೂಲಕ ಅಂಥ ವರ್ಗಾವಣೆಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳುವುದಕ್ಕೆ ಹಕ್ಕುಳ್ಳಂಥ ಪ್ರಾಧಿಕಾರಿಗಳ ಕಡೆಯಿಂದಾದ ಯಾವುದೆ ನಿರ್ಲಕ್ಷ್ಯ ಹಾಗೂ ವಿಳಂಬವು ಅನುದಾನ ನೀಡಿದ ಜಮೀನುಗಳ ಅಂಥ ವರ್ಗಾವಣೆಗಳನ್ನು ತಪ್ಪಿಸುವ ಹಾಗೂ ಸ್ವಾಧೀನವನ್ನು ಪುನಃ ಹಿಂದಕ್ಕೆ ನೀಡುವ ವಿಷಯದಲ್ಲಿ ಹೆಚ್ಚಿನ ಅಡೆತಡೆಗಳು ಉಂಟಾಗಬಹುದೆಂದು ಅಭಿಪ್ರಾಯಪಡುವ ಮೂಲಕ ಈ ಹಿಂದೆ ಉಲ್ಲೇಖಿಸಿದ ***ಮಂಚೇಗೌಡರ*** ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಾಸ್ತವವಾಗಿ ಸಮಸ್ಯೆಗಳನ್ನು ಅದರ ಯುಕ್ತ ಪ್ಯಾರಾವನ್ನು ತ್ವರಿತ ಉಲ್ಲೇಖಕ್ಕಾಗಿ ಈ ಮುಂದಿನಂತೆ ಉದ್ಧರಿಸಲಾಗಿರುತ್ತದೆ:

> *"12. ಈ ಕಾರ್ಯನೀತಿಯ ಅನುಸರಣೆಯಲ್ಲಿ, ವಿಧಾನ ಮಂಡಲವು ಅಂಥ ಅನುದಾನಿತ ಜಮೀನುಗಳ ವರ್ಗಾವಣೆಗಳು ಕೇವಲ ಯಾರ ಪ್ರಯೋಜನಕ್ಕಾಗಿ ಈ ಜಮೀನುಗಳನ್ನು ಅನುದಾನ ಮಾಡಲಾಗಿತ್ತೊ ಅಂಥ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಹಿತಾಸಕ್ತಿಗಳನ್ನು ಯುಕ್ತವಾಗಿ ರಕ್ಷಿಸಲು ಹಾಗೂ ಸಂರಕ್ಷಿಸಲು ಶೂನ್ಯವಾಗುತ್ತದೆ ಹಾಗೂ ಕೇವಲ ಶೂನ್ಯವಾಗಿರುವುದಿಲ್ಲವೆಂದು ಉಪಬಂಧ ಕಲ್ಪಿಸುವ ಅಧಿನಿಯಮಿತಿಯನ್ನು ಹೊರಡಿಸಲು ನಿಸ್ಸಂದೇಹವಾಗಿ ಸಕ್ಷಮವಾಗಿರುತ್ತದೆ. ಅಂಥ ಶಾಸನಾತ್ಮಕ ಉಪಬಂಧಗಳು ಇಲ್ಲದಿರುವಲ್ಲಿ ಕೂಡ, ಅನುದಾನದ ನಿಬಂಧನೆಗಳನ್ನು ಮೀರಿ ಅಥವಾ ಅಂಥ ಅನುದಾನವನ್ನು ಒಳಗೊಳ್ಳುವ ಯಾವುದೇ ಕಾನೂನು, ನಿಯಮ ಅಥವಾ ನಿಬಂಧನೆಗಳ ಉಲ್ಲಂಘನೆಯನ್ನು ಅನುದಾನ ನೀಡಿದ ಜಮೀನುಗಳ ವರ್ಗಾವಣೆಯು ಸ್ಪಷ್ಟವಾಗಿ ಶೂನ್ಯಗೊಳಿಸಬಹುದಾದಂತಿರುತ್ತದೆ ಹಾಗೂ ಕಾನೂನಿಗನುಸಾರವಾಗಿ ಶೂನ್ಯಗೊಳಿಸಬಹುದಾದ ವರ್ಗಾವಣೆಯನ್ನು ತಪ್ಪಿಸಿದ ತರುವಾಯ ಅಂಥ ಅನುದಾನಿತ ಜಮೀನುಗಳನ್ನು ಪುನಃ ವಾಪಸ್ಸು ನೀಡುವುದನ್ನು*

*ಅನುಮತಿಸಲಾಗುವುದು. ಕಾನೂನಿನ ಪ್ರಕ್ರಿಯೆಯ ಮೂಲಕ ಅಂಥ ಶೂನ್ಯಗೊಳಿಸಬಹುದಾದ ವರ್ಗಾವಣೆಗಳನ್ನು ತಪ್ಪಿಸುವುದು ಹಾಗೂ ಅನುದಾನಿತ ಜಮೀನುಗಳನ್ನು ಪುನಃ ವಾಪಸ್ಸು ಕೊಡುವುದಕ್ಕೆ ಸಂಬಂಧಿಸಿದಂತೆ ಯುಕ್ತ ಕಾನೂನು ಪ್ರಕ್ರಿಯೆಯ ಮೂಲಕ ಅಂಥ ವರ್ಗಾವಣೆಗಳನ್ನು ತಪ್ಪಿಸಲು ಕ್ರಮ ಕೈಗೊಳ್ಳುವುದಕ್ಕೆ ಹಕ್ಕುಳ್ಳಂಥ ಪ್ರಾಧಿಕಾರಿಗಳ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯ ಹಾಗೂ ವಿಳಂಬವು ಅನುದಾನ ನೀಡಿದ ಜಮೀನುಗಳ ಅಂಥ ವರ್ಗಾವಣೆಯನ್ನು ತಪ್ಪಿಸುವ ಹಾಗೂ ಸ್ವಾಧೀನವನ್ನು ಪುನಃ ಹಿಂದಕ್ಕೆ ನೀಡುವ ವಿಷಯದಲ್ಲಿ ಹೆಚ್ಚಿನ ಅಡೆತಡೆಗಳು ಉಂಟಾಗಬಹುದು. ದೀರ್ಘಕಾಲೀನ ಕಾನೂನು ವ್ಯವಹರಣೆಗಳು, ಯಾರ ಅನುಕೂಲಕ್ಕಾಗಿ ಮರು ಸ್ವಾಧೀನ ಮಾಡಿಕೊಳ್ಳಬೇಕೆಂದು ಉದ್ದೇಶಿಸುವಂಥ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸದಸ್ಯರ ಹಿತಾಸಕ್ತಿಗೆ ನಿಸ್ಸಂದೇಹವಾಗಿ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ. ಅನುದಾನದ ನಿಬಂಧನೆಗಳು ಅಥವಾ ಅಂಥ ಅನುದಾನಗಳನ್ನು ನಡೆಸುವ ಯಾವುದೇ ಕಾನೂನು, ನಿಬಂಧನೆ ಅಥವಾ ನಿಯಮದ ಉಲ್ಲಂಘನೆಯಲ್ಲಿ ಅನುದಾನಿತ ಜಮೀನುಗಳ ವರ್ಗಾವಣೆಯನ್ನು ಕಾನೂನಾತ್ಮಕವಾಗಿ ತಪ್ಪಿಸಬಹುದಾಗಿರುವುದರಿಂದ ಹಾಗೂ ಅಂಥ ಜಮೀನುಗಳ ಸ್ವಾಧೀನವನ್ನು ಕಾನೂನಿನ ಪ್ರಕ್ರಿಯೆಯ ಮೂಲಕ ಪಡೆಯಬಹುದಾಗಿರುವುದರಿಂದ, ಇದನ್ನು ಅಶಕ್ತ ಸಮುದಾಯಗಳ ಸದಸ್ಯರುಗಳಿಗೆ ಈ ಅನುದಾನಿತ ಜಮೀನುಗಳನ್ನು ತ್ವರಿತವಾಗಿ ಪುನಃ ಹಿಂದಿರುಗಿಸುವ ತನ್ನ ಉದ್ದೇಶವನ್ನು ಈಡೇರಿಸಲು ಹಾಗೂ ಲಂಬಿತ ವ್ಯಾಜ್ಯದ ಕಿರುಕುಳ ಹಾಗೂ ವಿಳಂಬವನ್ನು ತಪ್ಪಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ವಿಧಾನಮಂಡಲವು, ಅನುದಾನದ ನಿಬಂಧನೆಗಳು ಅಥವಾ ಅಂಥ ಅನುದಾನವನ್ನು ನಿಯಮಿಸುವ ಯಾವುದೇ ನಿಬಂಧನೆಗಳು, ನಿಯಮ ಅಥವಾ ಕಾನೂನಿನ ಉಲ್ಲಂಘನೆಯಲ್ಲಿ ಅಂಥ ಜಮೀನುಗಳ ವರ್ಗಾವಣೆಯು*

*ಶೂನ್ಯವಾಗುತ್ತದೆ ಹಾಗೂ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಸದಸ್ಯರ ಪ್ರಯೋಜನದ ಹೆಚ್ಚಿನ ಹಿತಾಸಕ್ತಿಯಲ್ಲಿ ನ್ಯಾಯಾಲಯುವನ್ನು ದೀರ್ಘಕಾಲೀನವಾಗಿ ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳನ್ನು ಅವಲಂಬಿಸದೆ ಈ ಉದ್ದೇಶವನ್ನು ಸಾಧಿಸುವುದಕ್ಕೆ ಸಂಬಂಧಿಸಿದಂತೆ ಸ್ವಾಭಾವಿಕ ನ್ಯಾಯುದ ತತ್ವಗಳೊಂದಿಗೆ ಸಂಗತವಾಗುವ ಯುಕ್ತ ಕಾರ್ಯವಿಧಾನವನ್ನು ಒದಗಿಸಲು ಅಧಿನಿಯಮಿತಿಯಲ್ಲಿ ನಿರ್ದಿಷ್ಟಪಡಿಸುವ ಮೂಲಕ ಅಂಥ ಅನುದಾನಿತ ಜಮೀನುಗಳನ್ನು ಪುನಃ ಹಿಂದಕ್ಕೆ ಪಡೆಯುವ ಯುಕ್ತ ಉಪಬಂಧವನ್ನು ರಚಿಸಲು ಸಂಪೂರ್ಣವಾಗಿ ಸಕ್ಷಮವಾಗಿರುತ್ತದೆ.*

(ಈ ನ್ಯಾಯಾಲಯ ಇದಕ್ಕೆ ಒತ್ತು ನೀಡಿರುತ್ತದೆ)

11. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯುವು ಸದರಿ ನಿರ್ಣಯದಲ್ಲಿ, ಪರಿನಿಯಮಗಳನ್ನು ಯಾವುದೇ ಕಾಲಪರಿಮಿತಿಯನ್ನು ಉಪಬಂಧಿಸಿರುವುದಿಲ್ಲ. ಪ್ರಾಧಿಕಾರಿಗಳು ಸರ್ಕಾರ ಪ್ರಜ್ಞಾಪೂರ್ವಕವಾಗಿ ಕಾರ್ಯ ನಿರ್ವಹಿಸಬೇಕು ಹಾಗೂ ಪರಿನಿಯಮದ ಉಪಬಂಧಗಳನ್ನು ಅನ್ವಯಿಸುವ ಪ್ರಕ್ರಿಯೆಯಲ್ಲಿ ವಿಳಂಬವಾದಲ್ಲಿ ಹಾಗೂ, ದೀರ್ಘಕಾಲದ ತರುವಾಯ ಕ್ರಮ ಕೈಗೊಂಡಲ್ಲಿ, ವಿಳಂಬವನ್ನೇ ಅಡ್ಡಿಪಡಿಸಿರುವ ಕೃತ್ಯವೆಂದು ಪರಿಗಣಿಸಬೇಕಾಗುತ್ತದೆಂದು ಅಭಿಪ್ರಾಯಪಟ್ಟು ಸದರಿ ನಿರ್ಣಯದಲ್ಲಿ ಭವಿಷ್ಯವಾಣಿಯನ್ನೇ ನುಡಿದಿರುತ್ತದೆ. 30 ವರ್ಷಗಳ ತರುವಾಯ ಮೂರನೇ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿ ಮೇಲಿನ ಕ್ರಮವನ್ನು ಯಾವುದೇ ಮಾನದಂಡಗಳು ಅಥವಾ ಮಾನಕಗಳಿಂದ ಸೂಕ್ತ ಕಾಲಾವಧಿಯೊಳಗೆ ಸಲ್ಲಿಸಲಾಗಿಲ್ಲವೆಂದು ಅರ್ಥೈಸುವಂತಿಲ್ಲ. ಹಾಗಾಗಿ ಇದು ಊರ್ಜಿತವಾಗುವುದಿಲ್ಲ. ಆದ್ದರಿಂದ 3ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವು ತಿರಸ್ಕರಿಸಲು ತಕ್ಕದಾಗಿರುತ್ತದೆ.

12. ಪ್ರಾಧಿಕಾರದಲ್ಲಿ ನಿಹಿತವಾದ ಅಧಿಕಾರಗಳ ಚಲಾವಣೆಯನ್ನು ಯುಕ್ತ ರೀತಿ ಚಲಾಯಿಸಬೇಕು. ಅದರಲ್ಲೂ ಮುಖ್ಯವಾಗಿ, ಸಮಯಕ್ಕೆ ಬದ್ಧವಾಗಿರುವುದು ಬಹು ಮುಖ್ಯವಾಗಿರುತ್ತದೆ. ಪರಿನಿಯಮದಡಿಯಲ್ಲಿ ಕಾಲವನ್ನು ನಿರ್ದಿಷ್ಟಪಡಿಸದಿರುವಾಗ ಅದು ಇತ್ತೀಚಿನ ಮೂಲಗಳ ತತ್ವಗಳಾಗಿರುವುದಿಲ್ಲವೆಂದು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ತತ್ವವನ್ನು ಪ್ರಸ್ತಾಪಿಸುವುದು ಇಲ್ಲಿ ಸೂಕ್ತವಾಗಿರುತ್ತದೆ. ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು 1983ರಲ್ಲಿ ತಾನೇ ವರದಿಯಾದ ಗೇಣಿದಾರನನ್ನು ತೆರವುಗೊಳಿಸುವಲ್ಲಿನ ವಿವಾದಾಂಶಕ್ಕೆ ಸಂಬಂಧಿಸಿದ ***ಮಾನ್‌ಸಾರಾಮ್ –ವಿರುದ್ಧ– ಎಸ್.ಪಿ. ಪಾಟಕ್ ಹಾಗೂ ಇತರರು***[4] ಪ್ರಕರಣದಲ್ಲಿ ತನ್ನ ತತ್ವವನ್ನು ನಿರೂಪಿಸಿರುವ ಉದಾಹರಣೆಯು ಇರುತ್ತದೆ. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಗೇಣಿದಾರನನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿ ಕಾಲ ಪರಿಮಿತಿಯನ್ನು ಪರಿನಿಯಮದಲ್ಲಿ ನಿರ್ದಿಷ್ಟಪಡಿಸದಿರುವಲ್ಲಿ, ಸದರಿ ಆವರಣದ ಆರಂಭಿಕ ಅಧಿಭೋಗವು ಕಾನೂನು ಬಾಹಿರವಾಗಿದೆಯೆಂಬ ಆಧಾರದ ಮೇಲೆ ಅಕಾರಣಯುತವಾದ ದೀರ್ಘಕಾಲೀನ ವಿಳಂಬದ ತರುವಾಯದ ತೆರವುಗೊಳಿಸುವಿಕೆಯು ಊರ್ಜಿತವಾಗಿರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತವೆ. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ 12ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"12. ಈ ಮೊದಲು ಹೇಳಿರುವ ಅಂಶವು ರದ್ದುಪಡಿಸಲು ಯುಕ್ತವಾದುದಾಗಿದ್ದು, ವಸತಿ ಹಂಚಿಕೆ ಅಧಿಕಾರಿಯ ಆದೇಶವನ್ನು ರದ್ದುಪಡಿಸಲಾಗಿದೆ. ಆದಾಗ್ಯೂ, ವಿಷಯದಲ್ಲಿರುವ ಮತ್ತೊಂದು ಆಯಾಮವನ್ನು ನಿರ್ಲಕ್ಷಿಸಲು ಸಾಧ್ಯವಾಗಿರುವುದಿಲ್ಲ. ಅಪೀಲುದಾರನು 1954ರಲ್ಲಿ ಆವರಣದೊಳಗೆ ಬಂದಿರುತ್ತಾನೆ. ಅಪೀಲುದಾರನಿಗೆ ಆವರಣದಲ್ಲಿರುವ ಅವಕಾಶ ಮಾಡಿಕೊಟ್ಟಂಥ ದಿವಂಗತ ಬಸಂತರಾಯ್ ಶರ್ಮ ಹಾಗೂ ಅಪೀಲುದಾರನ ನಡುವೆ ಸಾಕಷ್ಟು*

4. 1984(1) ಎಸ್‌ಸಿಸಿ 125

*ಕಾನೂನು ವ್ಯವಹರಣೆಗಳು ನಡೆದಿದ್ದಾಗ್ಯೂ, ಯಾರೊಬ್ಬರು ಎಂದಿಗೂ, ಅಪೀಲುದಾರನು 22(2)ನೇ ಖಂಡವನ್ನು ಉಲ್ಲಂಘಿಸಿ ಆವರಣದಲ್ಲಿ ಆಗಮಿಸಿರುತ್ತಾನೆಯೇ ಎಂದು ಪ್ರಶ್ನಿಸಿರುವುದಿಲ್ಲ. ಬಸಂತ್‌ರಾಯ್ ಶರ್ಮ ಮೃತರಾಗುವವರೆಗೂ, ಯಾರೊಬ್ಬರೂ ಅಪೀಲುದಾರನು ಆವರಣದಲ್ಲಿ ಅನಧಿಕೃತವಾಗಿ ಪ್ರವೇಶಿಸಿರುವ ಅಥವಾ 22ನೇ ಖಂಡದ ಉಲ್ಲಂಘನೆ ಕುರಿತು ವಿವಾದವನ್ನು ಪ್ರಸ್ತಾಪಿಸಿರಲಿಲ್ಲ. ಬಸಂತರಾಯ್ ಶರ್ಮ ತಮ್ಮ ಜೀವಿತಾವಧಿಯಲ್ಲಿ, ಅನಧಿಕೃತ ಪ್ರವೇಶವನ್ನು ಹೊರತುಪಡಿಸಿದ ಬಾಡಿಗೆ ನಿಯಂತ್ರಣ ಆದೇಶದಡಿಯಲ್ಲಿ ಅವರಿಗೆ ಲಭ್ಯವಾದ, ಅಪೀಲುದಾರರು ಆಪಾದಿಸಿದ ಕಾರಣಗಳಿಂದ ಆವರಣದ ಸ್ವಾಧೀನವನ್ನು ಪಡೆದುಕೊಳ್ಳಲು ಪ್ರಯತ್ನಿಸಿರುತ್ತಾರೆ. ಇದು ಬಸಂತ್‌ರಾಯ್ ಶರ್ಮ ಅಪೀಲುದಾರನನ್ನು ತನ್ನ ಬಾಡಿಗೆದಾರನೆಂದು ಹಾಗೂ ಇವರ ಗೇಣಿಗಾರಿಕೆಯಲ್ಲಿ ಯಾವುದೇ ದೌರ್ಬಲ್ಯವಿರಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದರೆಂಬ ತೀರ್ಮಾನಕ್ಕೆ ಬರಲು ಅವಕಾಶ ಕಲ್ಪಿಸುತ್ತದೆ. ಬಸಂತ್‌ರಾಯ್ ಶರ್ಮ ಮೃತರಾದ ತರುವಾಯ, ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿ ಶ್ರೀಮತಿ ಉಷಾರಾಣಿ ಎನ್. ಶರ್ಮ, ಅಪೀಲುದಾರನ ಆವರಣದಲ್ಲಿನ ಅಧಿಭೋಗ ಕುರಿತಂತೆ ಯಾವುದೇ ವಿವಾದವನ್ನು ಪ್ರಸ್ತಾಪಿಸಿರಲಿಲ್ಲ. ಈ ಸಂದರ್ಭದಲ್ಲಿ ಸಂಪೂರ್ಣವಾಗಿ ಹೊರಗಿನವನಾಗಿರುವಂಥ ಶ್ರೀಯುತ ಎಸ್.ಪಿ. ಪಾಠಕ್ ಎಂಬಾತ ಆವರಣದಲ್ಲಿ ಅಪೀಲುದಾರನ ಅನಧಿಕೃತ ಪ್ರವೇಶಕ್ಕೆ ಸಂಬಂಧಿಸಿದಂತೆ ದೂರು ನೀಡಲು ಮುಂದೆ ಬಂದಿರುತ್ತಾನೆ. ಅಪೀಲುದಾರನ ಅನುಸಾರ ಅನಧಿಕೃತ ಪ್ರವೇಶವು 1954ನೇ ವರ್ಷದಲ್ಲಾಗಿರುತ್ತದೆ. ಅಪೀಲುದಾರನು 1967ರಲ್ಲಿ ನಿವೃತ್ತನಾಗಿರುತ್ತಾನೆ. ಬಸಂತ್‌ರಾಯ್ ಶರ್ಮ 1967ರಲ್ಲಿ ಜೀವಂತವಾಗಿರುತ್ತಾನೆ. ಅಪೀಲುದಾರನು, ಲಾಭದಾಯಕ ಹುದ್ದೆಯನ್ನು ಹೊಂದಿರುವುದರಿಂದ ಆವರಣಕ್ಕೆ ಬಂದಿದ್ದಲ್ಲಿ,*

*ಖಂಡಿತವಾಗಿಯು ಬಸಂತ್ ರಾಯ್ ಶರ್ಮ, ಅನ್ಯಥಾ ಈತನೂ ಸಹ ಇದನ್ನೇ ಮಾಡಲು ಪ್ರಯತ್ನಿಸುತ್ತಿದ್ದನಾದರೂ ಅಪೀಲುದಾರನನ್ನು ಹೊರಹಾಕುವ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಬಸಂತ್‌ರಾಯ್ ಶರ್ಮನ ಮರಣದವರೆಗೂ ಹಾಗೂ ನಂತರವೂ ಯಾವುದೇ ಪ್ರಶ್ನೆಗಳಿಲ್ಲದೆ ಅಪೀಲುದಾರನಿಂದ ಬರುವ ಬಾಡಿಗೆಯನ್ನು ಒಪ್ಪಿಕೊಳ್ಳಲಾಗಿತ್ತು. ಇಷ್ಟು ಕಾಲಾವಧಿಯಲ್ಲಿ, ಈತನ ಆರಂಭಿಕ ಪ್ರವೇಶವು ಅನಧಿಕೃತವೆಂಬ ಆಧಾರದಲ್ಲಿ ಈತನನ್ನು ತೆರವುಗೊಳಿಸಬಹುದಿತ್ತು. ಆರಂಭಿಕ ಅನಧಿಕೃತ ಪ್ರವೇಶದ ಪ್ರಸ್ತಾವವನ್ನು ಹಗುರವಾಗಿ, ಭಿನ್ನವಾಗಿ ರೂಪಿಸಲು, ಯಾವುದೇ ರೀತಿಯಲ್ಲಿ ವಸತಿ ಹಂಚಿಕೆ ಅಧಿಕಾರಿಗಳಿಗೆ ಅನುಮತಿ ನೀಡಿದ್ದಲ್ಲಿ, ಪ್ರವೇಶಿಸಿದ 22ವರ್ಷಗಳ ತರುವಾಯ, 22(2)ನೇ ಖಂಡದ ಉಲ್ಲಂಘನೆಯಲ್ಲಿ ಆವರಣವನ್ನು ಪ್ರವೇಶಿಸಿದ್ದಾನೆಂಬ ಪುಟ್ಟ ಆಧಾರದ ಮೇಲೆ ಅಪೀಲುದಾರನನ್ನು ತೆರವುಗೊಳಿಸಬಹುದೆ? ನಿಸ್ಸಂದೇಹವಾಗಿ, ಸಾರ್ವಜನಿಕ ಕಾರ್ಯನೀತಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದನ್ನು ಬಹಿರಂಗಪಡಿಸುವಂಥ ಬಾಡಿಗೆ ನಿಯಂತ್ರಣ ಆದೇಶದ ಉಪಬಂಧಗಳನ್ನು ಗಮನಿಸಲು ಕಲೆಕ್ಟರ್‌ಗೆ ಅಧಿಕಾರಗಳು ಪ್ರದತ್ತವಾಗಿರುತ್ತವೆ. ಆದ್ದರಿಂದ, ಕಲೆಕ್ಟರ್‌ಗೆ ಉಲ್ಲಂಘನೆ ಯಾಗಿದೆಯೆಂದು ತಿಳಿದುಬಂದಲ್ಲಿ, ಉಪಬಂಧಗಳನ್ನು ಉಲ್ಲಂಘಿಸಿ ಆವರಣಗಳಿಗೆ ಬಂದಿರುವಂಥ ಯಾರನ್ನಾದರೂ ತೆರವುಗೊಳಿಸುವ ಮೂಲಕ ಉಲ್ಲಂಘನೆಯನ್ನು ಸರಿಪಡಿಸಲು ಸಾಕಷ್ಟು ಅಧಿಕಾರವನ್ನು ಹೊಂದಿರುತ್ತಾನೆ. ಆದರೆ, ಪರಿಣಾಮಕಾರಿ ಉದ್ದೇಶಕ್ಕೆ ಅಧಿಕಾರವನ್ನು ಪ್ರದತ್ತಗೊಳಿಸಿದಾಗ, ಇದನ್ನು ಯುಕ್ತ ರೀತಿಯಲ್ಲಿ ಚಲಾಯಿಸ ಬೇಕಾಗಿರುತ್ತದೆ. ಯುಕ್ತ ರೀತಿಯಲ್ಲಿನ ಅಧಿಕಾರದ ಚಲಾವಣೆಯು ಯುಕ್ತ ಕಾಲದೊಳಗೆ ಇದರ ಚಲಾವಣೆಯು ಪರಿಕಲ್ಪನೆ ಅಂತರ್ಗತವಾಗಿರುತ್ತದೆ. ನಿಸ್ಸಂದೇಹವಾಗಿ, ಯಾವುದೇ*

*ಪರಿಮಿತಿಯನ್ನು ಈ ಸಂಬಂಧದಲ್ಲಿ ಗೊತ್ತುಪಡಿಸಿರುವುದಿಲ್ಲ. ಆದರೆ ಸಮದೋಷದಲ್ಲಿ ಸ್ವಲ್ಪ ಮಟ್ಟಿಗೆ ಭೂ ಮಾಲೀಕನು ಗೇಣಿದಾರನಂತೆ 22ವರ್ಷಗಳ ಕಾಲ ಅಧಿಭೋಗದಲ್ಲಿದ್ದಂಥ ವ್ಯಕ್ತಿಯ ವಿರುದ್ಧ ತಮ್ಮ ಲೆಕ್ಕಚಾರವನ್ನು ಬದಲಿಸಬಹುದೆಂಬುದು ಒಬ್ಬರನ್ನು ಆಶ್ಚರ್ಯಚಕಿತರನ್ನಾಗಿಸಿರುತ್ತದೆ. ಅಂಥ ಪರಿಸ್ಥಿತಿಯಲ್ಲಿ, 22ವರ್ಷಗಳ ನಂತರ ಆರಂಭಿಕ ಪ್ರವೇಶ ಅನಧಿಕೃತವೆಂಬ ಸಕಾರಾತ್ಮಕ ತೀರ್ಮಾನಕ್ಕೆ ವಸತಿ ಹಂಚಿಕೆ ಅಧಿಕಾರಿಗಳು ಬಂದಿದ್ದಾಗ್ಯೂ, ನಿವೃತ್ತರಾದ 9 ವರ್ಷಗಳವರೆಗೂ ಆವರಣವನ್ನು ತೆರವುಗೊಳಿಸಲು ವಿಫಲರಾಗಿರುವುದು ಯುಕ್ತವಾಗಿರುವುದಿಲ್ಲ. ಈಗ, ಈತ ಮಾಡಿರುವಂಥ ರೀತಿಯಲ್ಲಿನ ತೆರವುಗೊಳಿಸುವ ನಿರುಪಾಧಿಕ ಆದೇಶವನ್ನು ಹೊರಡಿಸಲು ಈತ ಹೊಣೆಗಾರನಾಗಿರುವುದಿಲ್ಲ. ಇಂಥ ಸಂದರ್ಭದಲ್ಲಿ ಅಪೀಲುದಾರನನ್ನು ತೆರವುಗೊಳಿಸದಿರಲು ಇವನು ಮುಕ್ತನಾಗಿರುತ್ತಾನೆ. ಈ ಸಂಬಂಧದಲ್ಲಿ, ನಾವು ಮುರಳೀಧರ್ ಅಗರ್‌ವಾಲ್ –ವಿರುದ್ಧ– ಉತ್ತರ ಪ್ರದೇಶ ಸರ್ಕಾರವನ್ನು ಉಲ್ಲೇಖಿಸಬಹುದಾಗಿದ್ದು, ಅದರಲ್ಲಿ ಯು.ಪಿ. (ತಾತ್ಕಾಲಿಕ) ಬಾಡಿಗೆ ನಿಯಂತ್ರಣ ಹಾಗೂ ತೆರವುಗೊಳಿಸುವಿಕೆ ಅಧಿನಿಯಮ, 1947ರ 7(2) ಪ್ರಕರಣವು ಅಗತ್ಯಪಡಿಸುವಂಥ ಆತನ ಹೆಸರಿನಲ್ಲಿರುವ ಹಂಚಿಕೆಯ ಆದೇಶವಿಲ್ಲದ ಆವರಣಗಳ ಅಧಿಭೋಗದಲ್ಲಿರುವಂಥ ರಾಮ್ ಅಗ್ಯನ್ ಸಿಂಗ್‌ನನ್ನು ಆತನ ಅಧಿಭೋಗ ಕಾನೂನುಬದ್ಧವೆಂದು ಪರಿಗಣಿಸುವ ಮೂಲಕ ಆವರಣವನ್ನು ಉಳಿಸಿಕೊಳ್ಳಲು ಅನುಮತಿಸಿ, ಈ ನ್ಯಾಯಾಲಯವು ಆ ಆದೇಶದೊಂದಿಗೆ ಮಧ್ಯೆ ಪ್ರವೇಶಿಸಲು ನಿರಾಕರಿಸಿರುತ್ತದೆ. ಯು.ಪಿ. (ತಾತ್ಕಾಲಿಕ) ಬಾಡಿಗೆ ನಿಯಂತ್ರಣ ಹಾಗೂ ತೆರವುಗೊಳಿಸುವಿಕೆ ಅಧಿನಿಯಮ, 1947ರ ಉಪಬಂಧಗಳ ಉಲ್ಲಂಘನೆಯಲ್ಲಿ ಅನಧಿಕೃತ ಅಧಿಭೋಗದ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ 7ಎ ಪ್ರಕರಣವು ಅಧಿಕಾರವನ್ನು ಪ್ರದತ್ತಗೊಳಿಸಿರುತ್ತದೆ. ಆದರೆ,*

*ಅನುಚಿತ ವಿಳಂಬ ಅಥವಾ ಹಾಗೆ ಮಾಡುವುದು ವಿಹಿತವಲ್ಲವೆಂದು ಜಿಲ್ಲಾಧಿಕಾರಿಗೆ ಮನವರಿಕೆಯಾದಲ್ಲಿ, ಅನಧಿಕೃತ ಅಧಿಭೋಗದಲ್ಲಿದ್ದಾನೆಂದು ಕಂಡು ಬರಲು ವ್ಯಕ್ತಿಯನ್ನು ತೆರವುಗೊಳಿಸದಿರಲು ಜಿಲ್ಲಾಧಿಕಾರಿಯನ್ನು ಸಮರ್ಥಗೊಳಿಸುವಂಥ ಪ್ರಕರಣದ ಉಪಬಂಧವಿರುತ್ತದೆ. ಬಾಡಿಗೆ ನಿಯಂತ್ರಣ ಆದೇಶದೊಂದಿಗಿನ ಅನುಸರಣೆಯನ್ನು ಖಾತರಿಪಡಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಅವಶ್ಯಕ ಕ್ರಮ ಕೈಗೊಳ್ಳಲು ಕಲೆಕ್ಟರ್‌ನಿಗೆ ಪ್ರದತ್ತವಾದಂಥ ಅಧಿಕಾರಿಗಳಿರುವಂಥ 28ನೇ ಖಂಡಕ್ಕೆ ಅಂಥ ಯಾವುದೇ ಉಪಬಂಧವಿರುವುದಿಲ್ಲ. ಆದರೆ ಈ ಮೊದಲು ಹೇಳಿದಂತೆ, ಎಲ್ಲಿ ಅಧಿಕಾರವು ಉದ್ದೇಶವನ್ನು ಪರಿಣಾಮಕಾರಿಗೊಳಿಸಲು ಪ್ರದತ್ತಗೊಳಿಸಿರುವಲ್ಲಿ, ಇನ್ನೂ ಯುಕ್ತ ರೀತಿಯಲ್ಲಿ ಚಲಾವಣೆಯು ಯುಕ್ತ ಕಾಲದೊಳಗೆ ತನ್ನ ಚಲಾವಣೆಯನ್ನು ಅಂತರ್ಗತಗೊಳಿಸಿಕೊಂಡಿರುತ್ತದೆ. ಇದು ಹಿಂದಿನ ಘಟನೆಗಳ ಮೂಲಕ ಸಮರ್ಥಿಸಿಕೊಳ್ಳಲು ಪರಿಣಾಮಕಾರಿಯಾಗಿ ಸುನಿಶ್ಚಿತವಾಗಿರುತ್ತದೆ. ಆದಾಗ್ಯೂ, ಗುಜರಾತ್ ಸರ್ಕಾರ –ವಿರುದ್ಧ– ಪಟೇಲ್ ರಾಘವನಾಥ ಹಾಗೂ ಇತರರು ಪ್ರಕರಣದಲ್ಲಿನ ತೀರ್ಪು ಓದಲು ಲಭ್ಯವಾಗಿರುತ್ತದೆ. ಆ ಪ್ರಕರಣದಲ್ಲಿ, ಆಯುಕ್ತನು, ಪುನರೀಕ್ಷಣಾ ಅಧಿಕಾರವ್ಯಾಪ್ತಿಯುನ್ನು ಚಲಾಯಿಸಲು ಕಾಲಪರಿಮಿತಿಯ ಯಾವುದೇ ಅವಧಿಯನ್ನು ಗೊತ್ತುಪಡಿಸದಂಥ ಬಾಂಬೆ ಭೂ ರಾಜಸ್ವ ಸಂಹಿತೆಯ 211ನೇ ಪ್ರಕರಣದಡಿಯಲ್ಲಿನ ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯನ್ನು ಖುದ್ದಾಗಿ ಚಲಾಯಿಸಿರುತ್ತಾರೆ. ಆಯುಕ್ತರು, ಪರಿಷ್ಕರಿಸಬೇಕೆಂದು ಕೋರಿದಂಥ ಅರ್ಜಿಯಮೇಲೆ ಕಲೆಕ್ಟರ್ ಆದೇಶ ಮಾಡಿದ ಒಂದು ವರ್ಷದ ತರುವಾಯ ಪುನರೀಕ್ಷಣಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿರುತ್ತಾರೆ. ಉಚ್ಚ ನ್ಯಾಯಾಲಯವು ಆಯುಕ್ತರ ಆದೇಶವನ್ನು ರದ್ದುಪಡಿಸಿರುತ್ತದೆ. ಗುಜರಾತ್ ಸರ್ಕಾರವು ಸಲ್ಲಿಸಿದ ಅಪೀಲಿನಲ್ಲಿ, ಈ ನ್ಯಾಯಾಲಯವು,*

*ಕಾಲ ಪರಿಮಿತಿಯ ಗೊತ್ತುಪಡಿಸಿದ ಅವಧಿಯು ಇಲ್ಲದಿರುವಲ್ಲಿ ಪರಿವೀಕ್ಷಣಾ ಅಧಿಕಾರವನ್ನು ಯುಕ್ತ ಕಾಲಾವಧಿಯೊಳಗೆ ಚಲಾಯಿಸಬೇಕು ಹಾಗೂ ಒಂದು ವರ್ಷದ ಅವಧಿಯ ತುಂಬಾ ತಡವಾಯಿತೆಂದು ಅಭಿಪ್ರಾಯಪಟ್ಟು ಇತರೆ ವಿಷಯಗಳೊಂದಿಗೆ ಅಭಿಪ್ರಾಯ ನೀಡುವುದಕ್ಕೆ ಮಧ್ಯೆ ಪ್ರವೇಶಿಸಲು ನಿರಾಕರಿಸಿರುತ್ತದೆ. ಈ ಆಯಾಮವು, ಮೃತ ಭೂ ಮಾಲೀಕನ ಉತ್ತರಾಧಿಕಾರಿಯ ಹಿತಾಸಕ್ತಿ ಮೂಲಕ ಪಿತೂರಿಯನ್ನು ಇವರ ಗಮನಕ್ಕೆ ತಂದ ರುಜುವಾತಾಗಿನ ತಾಂತ್ರಿಕ ಉಲ್ಲಂಘನೆ ಹಾಗೂ ಅಪೀಲುದಾರನನ್ನು ಆತ ಬಂದ 22 ವರ್ಷಗಳ ತರುವಾಯ ಹಾಗೂ ಈತನ ನಿವೃತ್ತಿಯಾದ 9 ವರ್ಷಗಳ ತರುವಾಯ 1954ರಲ್ಲಿನ ಇವರ ಪ್ರವೇಶ 22 (2) ಖಂಡದ ಉಲ್ಲಂಘನೆಯೆಂಬ ಅಲ್ಪ ಕಾರಣದ ಮೇಲೆ ಹೊರಹಾಕಿರುವುದನ್ನು ಕುರಿತಂತೆ ಆದೇಶಿಸುವ ಮೊದಲು ವಸತಿ ಹಂಚಿಕೆ ಅಧಿಕಾರಿಯ ಮನದಲ್ಲಿ ಇರಲೇಬೇಕಾಗಿತ್ತು.*

13. ಮೇಲಿನ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು, ***ಪಂಜಾಬ್ ಸರ್ಕಾರ –ವಿರುದ್ಧ– ಭಟಿಂದಾ ಜಿಲ್ಲಾ ಸಹಕಾರಿ ಹಾಲು ಉತ್ಪನ್ನಗಳ ಒಕ್ಕೂಟ, ಲಿ.***[5] ಪ್ರಕರಣದಲ್ಲಿನ ನಿರ್ಣಯಕ್ಕೆ ಉಲ್ಲೇಖವನ್ನು ನೀಡುತ್ತಾ ಅದರಲ್ಲಿನ 10ನೇ ಪ್ಯಾರಾದಲ್ಲಿ ವರದಿಯಾದ ***ಸಂತೋಷ್‌ಕುಮಾರ್ ಶಿವಗೊಂಡ ಪಾಟೀಲ್ ಹಾಗೂ ಇತರರು –ವಿರುದ್ಧ– ಬಾಳಸಾಹೇಬ್ ತುಕಾರಂ ಶಿವಾಲೆ ಹಾಗೂ ಇತರರು*** ಪ್ರಕರಣದಲ್ಲಿನ ತರುವಾಯದ ತೀರ್ಪಿನಲ್ಲಿ ಪುನರುಚ್ಚರಿಸಿದ್ದು ಪರಿನಿಯಮಗಳು ಕಾಲ ಪರಿಮಿತಿಯನ್ನು ಗೊತ್ತುಪಡಿಸದಿರುವಲ್ಲಿ ಇದನ್ನು ಯುಕ್ತ ಕಾಲಾವಧಿಯೊಳಗೆ ಖುದ್ದಾಗಿಯಾಗಲೀ ಅಥವಾ ಅನ್ಯಥಾ ಯುಕ್ತ ಕಾಲಾವಧಿಯೊಳಗೆ ಚಲಾಯಿಸಬೇಕಾಗಿರುತ್ತದೆ. ಮಹಾರಾಷ್ಟ್ರ ಭೂ ರಾಜಸ್ವ ಸಂಹಿತೆಯಡಿಯಲ್ಲಿನ ಯುಕ್ತ ಅವಧಿಯು, ಅಸಾಧಾರಣ ಸಂದರ್ಭಗಳಿಗೆ ಒಳಪಟ್ಟ ಮೂರು ವರ್ಷಗಳಾಗಿರಬೇಕೆಂದು ಅಭಿಪ್ರಾಯ ನೀಡಲು

5. (2009) 9 ಎಸ್‌ಸಿಸಿ 352

ಕೋರಿದ್ದು, 17 ವರ್ಷಗಳು ಮೀರಿದ ತರುವಾಯ ಪರಿವೀಕ್ಷಣಾ ಅಧಿಕಾರದ ಚಲಾವಣೆಯು ಯುಕ್ತ ಕಾಲಾವಧಿಯೊಳಗಿದೆಯೆಂದು ಅರ್ಥೈಸಲು ಊಹಿಸಬಹುದಾದ ಯಾವ ಎಳೆಯೂ ಇರುವುದಿಲ್ಲವೆಂದು ಪ್ರವರ್ಗೀಯವಾಗಿ ಅಭಿಪ್ರಾಯಪಟ್ಟಿರುತ್ತದೆ. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ 10, 11 ಹಾಗೂ 12ನೇ ಪ್ಯಾರಾಗಳಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಈ ಮುಂದಿನಂತಿರುತ್ತದೆ:

> *"10. ಇತ್ತೀಚೆಗೆ ಪಂಜಾಬ್ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ, 1948ರ 21ನೇ ಪ್ರಕರಣದಡಿಯಲ್ಲಿನ ಪುನರವಲೋಕನದ ಅಧಿಕಾರಗಳೊಂದಿಗೆ ವ್ಯವಹರಿಸುವಾಗ ಪಂಜಾಬ್ ಸರ್ಕಾರ ಮತ್ತು ಇತರರು –ವಿರುದ್ಧ– ಭತಿಂದ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿ. ಪ್ರಕರಣದಲ್ಲಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ: (ಎಸ್‌ಸಿಸಿ ಪು.367, ಪ್ಯಾರಾ 17–19)"*

> *"17. ಅಧಿನಿಯಮದ 21ನೇ ಪ್ರಕರಣದ ಸಾದಾ ಓದಿನಿಂದ ಇದರಲ್ಲಿ ಕಾಲಪರಿಮಿತಿಯ ಅವಧಿಯನ್ನು ನಿರ್ದಿಷ್ಟಪಡಿಸಿರುವುದಿಲ್ಲವೆಂದು ತಿಳಿದು ಬಂದಿದ್ದಾಗ್ಯೂ ಇದು ಖುದ್ದಾಗಿ ಅಧಿಕಾರವನ್ನು ಯಾವುದೇ ಸಮಯದಲ್ಲಿ ಚಲಾಯಿಸಬಹುದೆಂಬ ಅರ್ಥವನ್ನು ಹೊಂದಿರುವುದಿಲ್ಲ.*

> *18. ಯಾವುದೇ ಕಾಲಪರಿಮಿತಿ ಅವಧಿಯನ್ನು ಗೊತ್ತುಪಡಿಸದಿದ್ದಲ್ಲಿ, ಶಾಸನಾತ್ಮಕ ಪ್ರಾಧಿಕಾರ ಯುಕ್ತ ಕಾಲಾವಧಿಯೊಳಗೆ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬೇಕೆಂಬುದು ಒಂದು ಸಾಮಾನ್ಯ*

17. (1965) 2 ಎಎಲ್‌ಎಲ್ ಇಆರ್ 836

*ತಿಳುವಳಿಕೆಯಾಗಿರುತ್ತದೆ. ಆದಾಗ್ಯೂ, ಯಾವುದು ಯುಕ್ತ ಅವಧಿಯಾಗಿರತಕ್ಕದೆಂಬುದು, ಪರಿನಿಯಮಗಳ ಸ್ವರೂಪ, ಅವುಗಳಡಿಯಲ್ಲಿನ ಹಕ್ಕುಗಳು ಹಾಗೂ ಬದ್ಧತೆಗಳು ಹಾಗೂ ಇತರೆ ಯುಕ್ತ ವಾಸ್ತವಾಂಶಗಳನ್ನು ಅವಲಂಬಿಸಿರುತ್ತವೆ.*

*19. ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯು ನಮ್ಮ ಅಭಿಪ್ರಾಯದಲ್ಲಿ, ಸಾಮಾನ್ಯವಾಗಿ, ಸದರಿ ಅಧಿನಿಯಮದ ನಿಬಂಧನೆಗಳಲ್ಲಿನ ತಾತ್ಪರ್ಯಕ್ಕೆ ಸಂಬಂಧಿಸಿದಂತೆ ಮೂರು ವರ್ಷಗಳ ಅವಧಿಯೊಳಗೆ ಚಲಾಯಿಸತಕ್ಕದ್ದಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ, ಇದು ಐದು ವರ್ಷಗಳ ಅವಧಿಯನ್ನು ಮೀರುವಂತಿರುವುದಿಲ್ಲ. ಹಾಗಾಗಿ, ಉಚ್ಚ ನ್ಯಾಯಾಲಯುದ ದೃಷ್ಟಿಕೋನವನ್ನು ಅಕಾರಣಯುತ ವಾದುದೆಂದು ಹೇಳಲಾಗುವುದಿಲ್ಲ. ಈ ಮೇಲೆ ಮಾಡಲಾದ ಚರ್ಚೆಗಳ ಹಿನ್ನಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯುಕ್ತ ಅವಧಿಯೆಂಬುದು ಶಾಸನಾತ್ಮಕ ಯೋಜನೆಯಿಂದ ಕಂಡುಬಂದಿರುವಂಥದ್ದಾಗಿರಬೇಕು. ಈ ಮೊದಲು ಸೂಚಿಸಲಾದಂತೆ, ಅಧಿನಿಯಮದ 11ನೇ ಪ್ರಕರಣದ (6)ನೇ ಉಪ–ಪ್ರಕರಣಕ್ಕೆ ಸಂಬಂಧಿಸಿದಂತೆ ಉಪಬಂಧಿಸಿದ ಕಾಲಪರಿಮಿತಿಯು ಗರಿಷ್ಠ ಅವಧಿಯು ಐದು ವರ್ಷಗಳಾಗಿರುತ್ತವೆ".*

*11. ಪರಿನಿಯಮವು ಪುನರೀಕ್ಷಣಾ ಅಧಿಕಾರವನ್ನು ಚಲಾಯಿಸಲು ಕಾಲಮಿತಿಯನ್ನು ಗೊತ್ತುಪಡಿಸದಿದ್ದಲ್ಲಿ, ಯುಕ್ತ ಕಾಲದೊಳಗೆ ಅಧಿಕಾರವನ್ನು ಚಲಾಯಿಸಬೇಕೆಂದಲ್ಲದೆ ಅಂಥ ಅಧಿಕಾರವನ್ನು ಯಾವುದೇ ಸಮಯುದಲ್ಲಿ ಚಲಾಯಿಸಬಹುದೆಂದಲ್ಲವೆಂದು ಸ್ಪಷ್ಟವಾಗಿ ಇತ್ಯರ್ಥಗೊಂಡಿರುವುದು ಕಂಡುಬರುತ್ತದೆ. ಇದರಿಂದಾಗಿ,*

*ಅವಧಿ ಮೀರಿದ ತರುವಾಯ, ಕಾನೂನು ಇತ್ಯರ್ಥಗೊಂಡಿರುವ ವಿಷಯವನ್ನು ಇತ್ಯರ್ಥವಾಗದ ವಿಷಯವೆಂದು ಪರಿಭಾವಿಸುವುದನ್ನು ನಿರೀಕ್ಷಿಸುವುದಿಲ್ಲ. ಪುನರವಲೋಕನದ ಅಧಿಕಾರವಿರುವಂಥ ಯಾವುದೇ ಕಾಲಮಿತಿಯನ್ನು ಶಾಸನವು ಉಪಬಂಧಿಸದಿರುವೆಡೆ, ಪ್ರಾಧಿಕಾರದ ಮೂಲಕ, ಖುದ್ದಾಗಿ ಅಥವಾ ಅನ್ಯಥಾ ರೂಪದಲ್ಲಿ ಚಲಾಯಿಸಬೇಕಾಗಿದ್ದು, ಇದು ಯುಕ್ತ ಕಾಲದೊಳಗೆ ಅಂಥ ಅಧಿಕಾರದ ಚಲಾವಣೆಯ ಅದರ ಅಂತರ್ನಿಹಿತವಾಗಿರುತ್ತದೆಂದು ನಿರೂಪಿಸುತ್ತದೆ.*

12. ಸಾಮಾನ್ಯವಾಗಿ, ಮಹಾರಾಷ್ಟ್ರ ಭೂ ರಾಜಸ್ವ ಸಂಹಿತೆಯ 257ನೇ ಪ್ರಕರಣದಡಿಯಲ್ಲಿ 3 ವರ್ಷಗಳನ್ನು ಪುನರವಲೋಕನದ ಅಧಿಕಾರಾವಧಿಯೊಳಗಿನ ಯುಕ್ತ ಅವಧಿಯೆಂದೂ ಖಂಡಿತವಾಗಿ ಅಧಿಕಾರವನ್ನು ಈ ಅವಧಿಯಲ್ಲಿ ಚಲಾಯಿಸಬಹುದಾಗಿರುತ್ತದೆಂದು ನಿರೂಪಿಸಿರುತ್ತಿದಾದರೂ, 17 ವರ್ಷಗಳು ಮೀರಿದ ತರುವಾಯ ಪುನರವಲೋಕನ ಅಧಿಕಾರವನ್ನು ಚಲಾಯಿಸಲು ಯುಕ್ತ ಸಮಯವಾಗಿರುವುದಿಲ್ಲ. ಮಹಾರಾಷ್ಟ್ರ ಭೂ ರಾಜಸ್ವ ಸಂಹಿತೆಯ 257ನೇ ಪ್ರಕರಣದಡಿಯಲ್ಲಿನ ಉಪ-ವಿಭಾಗಾಧಿಕಾರಿಯ ಪುನರವಲೋಕನ ಅಧಿಕಾರದ ಆರಂಭವು ದಿನಾಂಕ: 30.3.1976ರಂದು ತಹಸೀಲ್ದಾರರು ಹೊರಡಿಸಿದ ಆದೇಶವು ದೋಷಪೂರ್ಣವೆಂದೂ ಹಾಗೂ ಕಾನೂನಾತ್ಮಕವಾಗಿ ಸರಿಯಾಗಿಲ್ಲವೆಂದು ಊಹಿಸುವ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಲ್ಲಿನ ಪ್ರಕ್ರಿಯೆಯು ದುರುಪಯೋಗವಾಗಿರುತ್ತದೆ."

14. ಹಾಗಾಗಿ, ಯಾವುದೇ ವಿನಾಯಿತಿಯಿಲ್ಲದೆ, ಕಾನೂನಿನ ಎಲ್ಲಾ ಆಯಾಮಗಳಿಂದ, ಸರ್ವೋಚ್ಚ ನ್ಯಾಯಾಲಯವು ಯಾವುದೇ ಮಿತಿಯನ್ನು

ನಿರ್ದಿಷ್ಟಪಡಿಸದಿರುವೆಡೆ ಪರಿನಿಯಮದಡಿಯಲ್ಲಿನ ಅಧಿಕಾರಗಳು/ಅಧಿಕಾರ ವ್ಯಾಪ್ತಿಯನ್ನು ಚಲಾವಣೆಯ ಸಂಬಂಧದಲ್ಲಿ ಕಾನೂನನ್ನು ಪ್ರವರ್ಗೀಯವಾರಾಗಿ ನಿರೂಪಿಸಿರುತ್ತದೆ. ಹಾಗಾಗಿ, ಈ ಸಂಬಂಧದಲ್ಲಿನ ಕಾನೂನು ಪೂರ್ವ ನಿದರ್ಶನರಹಿತ ವಿಷಯವಾಗಿರುತ್ತದೆ. ಪರಿನಿಯಮಗಳಡಿಯಲ್ಲಿನ ಪ್ರಾಧಿಕಾರಿಗಳು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ, ಸರ್ವೋಚ್ಚ ನ್ಯಾಯಾಲಯವು ಮಂಡಿಸಿದ ನಿರ್ಬಂಧಕಾಜ್ಞೆಯ ಜೊತೆಗೆ ಯಾವುದೇ ಮಿತಿಯನ್ನು ನಿರ್ದಿಷ್ಟಪಡಿಸದಿರುವೆಡೆ, ಸರ್ವೋಚ್ಚ ನ್ಯಾಯಾಲಯವು, ಕುಂದುಕೊರತೆಗಳ ನಿವಾರಣೆ ಕೋರಿ ವ್ಯಾಜ್ಯಕಾರರ ಕಡೆಯಿಂದಾದ ವಿಳಂಬದ ಸಂಬಂಧದಲ್ಲಿ ಕಾನೂನನ್ನು ಇತ್ಯರ್ಥಗೊಳಿಸಿರುತ್ತದೆ.

15. ವಿಳಂಬ ಹಾಗೂ ಉಪೇಕ್ಷೆಗಳ ಕುರಿತ ಕಾನೂನು, ಭೂ ಸ್ವಾಧೀನದ ವಿಷಯದಲ್ಲಿನ ಅಥವಾ ಸೇವಾ ಕಾನೂನಿನ ಕ್ಷೇತ್ರದಲ್ಲಿನ ತೀರ್ಪುಗಳ ಮೂಲಕ ಇತ್ಯರ್ಥಗೊಂಡಿರುತ್ತದೆ. ಸರ್ವೋಚ್ಚ ನ್ಯಾಯಾಲಯವನ್ನು ವಿವರಿಸಲಾಗದ ಒಟ್ಟಾರೆ ವಿಳಂಬವು, ಪಕ್ಷಕಾರನ ಹಕ್ಕುಳ್ಳ ನ್ಯಾಯಿಕ ನ್ಯಾಯ ನಿರ್ಣಯವನ್ನು ಕೋರಲು ಪಕ್ಷಕಾರರ ಹಕ್ಕಿಗೆ ಮಾರಣಾಂತಿಕ ಸ್ವರೂಪದ್ದಾಗಿರುತ್ತದೆಂದು ಅಭಿಪ್ರಾಯಪಡಲು ಕೋರಲಾಗಿರುತ್ತದೆ.

16. ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಪಡಿಸಿದ ಕಾನೂನನ್ನು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೂ ಕೂಡ ನೇರವಾಗಿ ಅನ್ವಯಿಸಲಾಗಿರುತ್ತದೆ. ಅನುದಾನವು 1934ನೇ ವರ್ಷದಾಗಿದ್ದು, ಮೊದಲ ಕ್ರಯಪತ್ರವನ್ನು ದಿನಾಂಕ: 2.9.1971ರಂದು ಜಾರಿಗೊಳಿಸಿದ್ದು, ಎರಡನೇ ಕ್ರಯವನ್ನು 1973ರಲ್ಲಿಯೂ ಮಾಡಿದ್ದು, ಕೊನೆಯ ಮಾರಾಟ ವ್ಯವಹರಣೆಯನ್ನು ದಿನಾಂಕ: 27.2.1988ರಂದು ಪರಿಣಾಮಕಾರಿಯಾಗುವಂತೆ ಮಾಡಲಾಗಿರುತ್ತದೆ. ಇದರ ಪರಿಣಾಮವಾಗಿ, ಮೂರನೇ ಪಕ್ಷಕಾರನ ಹಕ್ಕುಗಳನ್ನು ಸೃಜಿಸಬೇಕೆಂದಾಗಿರುತ್ತದೆ. ಅಲ್ಲದೆ ಪಕ್ಷಕಾರರು ಇತ್ಯರ್ಥಗೊಂಡ ಸ್ಥಿತಿಯಲ್ಲಿರುತ್ತಾರೆ.

17. ಈ ಸಂದರ್ಭದಲ್ಲಿ, ಉಪಯುಕ್ತವಾದ ಉಲ್ಲೇಖಗಳನ್ನು, ತೀರ್ಪುಗಳ ಉದಾಹರಣೆಗಳಿಂದ ಮಾಡಬೇಕಾಗುತ್ತದೆ. ಈ ಸಂಬಂಧದಲ್ಲಿನ ಇತ್ತೀಚಿನ ನಿರ್ಣಯಗಳು ಈ ಮುಂದಿನಂತಿರುತ್ತವೆ:

1) (1996) 6 ಎಸ್‌ಸಿಸಿ 445 ರಾಜಸ್ಥಾನ ಸರ್ಕಾರ ಹಾಗೂ ಇತರರು –ವಿರುದ್ಧ– ಡಿ.ಆರ್. ಲಕ್ಷ್ಮಿ ಮತ್ತು ಇತರರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಭಾರತ ಸಂವಿಧಾನದ ವ್ಯಾಪ್ತಿಯನ್ನು ಚಲಾಯಿಸುವಾಗ ಮಿತಿಮೀರಿದ ವಿಳಂಬವಾಗಿರುವಂಥ ರಿಟ್ ಅರ್ಜಿಗಳನ್ನು ಪುರಸ್ಕರಿಸಬಾರದೆಂದು ಉಚ್ಚ ನ್ಯಾಯಾಲಯಗಳಿಗೆ ಎಚ್ಚರಿಕೆ ನೀಡಿರುತ್ತದೆ.

2) ಅಂತೆಯೇ, ಪುರಸಭೆ, ಅಹಮದ್‌ನಗರ ಮತ್ತು ಮತ್ತೊಬ್ಬರು –ವಿರುದ್ಧ– ಷಾ ಹೈದರ್ ಬೇಗ್ ಹಾಗೂ ಇತರರು (2002)2 ಎಸ್‌ಸಿಸಿ 48 ಪ್ರಕರಣದಲ್ಲಿ, ಈ ಸಂಬಂಧದಲ್ಲಿ ಉಚ್ಚ ನ್ಯಾಯಾಲಯವು ವಿವೇಚನೆಯನ್ನು ಸಮರ್ಥವಾಗಿ ಚಲಾಯಿಸುವುದಕ್ಕೆ ಸಂಬಂಧಿಸಿದ ನಿಜವಾದ ಪರೀಕ್ಷೆಯು, ಸಮಯವು ಭೌತಿಕವಾಗಿ ಜಾರಿಹೋಗಿರುವುದಲ್ಲ. ಆದರೆ ಮೊಕದ್ದಮೆಯು ವಿಳಂಬದ ಕಾರಣದ್ದಾಗಿರುತ್ತದೆಯೆ, ಎಂಬುದಾಗಿದ್ದು, ಇವನು ತನ್ನ ಕ್ಲೇಮನ್ನು ಬಿಟ್ಟು ಕೊಡಬಹುದೆಂದು ಅಥವಾ ಅರ್ಜಿದಾರನು ರಿಟ್ ನ್ಯಾಯಾಲಯಕ್ಕೆ ಹೋಗಿರುವೆಡೆ, ಮೂರನೇ ಪಕ್ಷಕಾರನ ಹಕ್ಕುಗಳು ವಿಳಂಬಕ್ಕೆ ಸಂಬಂಧಿಸಿದಂತೆ ಸೂಕ್ತ ಕಾರಣಗಳು ಇಲ್ಲದ ಹೊರತು, ಬಾಧಕಕ್ಕೆ ಸಿಲುಕಲು ಅವಕಾಶ ನೀಡುವಂತಿಲ್ಲವೆಂದು ಊಹಿಸಿರುವುದು ಅರ್ಜಿದಾರನ ಕಡೆಯಿಂದಾದ ನಿರ್ಲಕ್ಷ್ಯವಾಗಿರುತ್ತದೆ.

18. ಒಟ್ಟಾರೆ ವಿಳಂಬ ಹಾಗೂ ಉಪೇಕ್ಷೆಗಳ ಆಧಾರದ ಮೇಲೆ, ಅಧಿನಿಯಮದ 5(2)ನೇ ಪ್ರಕರಣದಡಿಯಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಗಳನ್ನು

ತಿರಸ್ಕರಿಸಬೇಕೆಂದು ಅಗತ್ಯಪಡಿಸಬೇಕಾಗುತ್ತದೆ. ತದನುಸಾರವಾಗಿ, ರಿಟ್ ಅರ್ಜಿಯನ್ನು ಅಂಗೀಕರಿಸಬೇಕೆಂದೂ ಅಗತ್ಯಪಡಿಸಬೇಕಾಗಿರುತ್ತದೆ.

19. ಪಿಟಿಸಿಎಲ್ ಅಧಿನಿಯಮವು ದಿನಾಂಕ: 1.1.1979ರಿಂದ ಪರಿಣಾಮಕಾರಿಯಾಗಿರುವಂತೆ ಜಾರಿಯಲ್ಲಿರುವುದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅನುದಾನ ಪಡೆದವನಾಗಲೀ ಅಥವಾ ಆತನ ಕಾನೂನು ಸಮ್ಮತ ವಾರಸುದಾರನಾಗಲೀ 5ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಅವರಲ್ಲಿ ನಿಹಿತವಾದ ಹಕ್ಕನ್ನು ಸುಸ್ಥಾಪಿಸಲು ಉತ್ಸುಕರಾಗಿರುತ್ತಾರೆಂದು ಭಾವಿಸಿ, ಅವರನ್ನು ಸದೃಢವಾದ ರೀತಿಯಲ್ಲಿ ವರ್ತಿಸಲು ಅಗತ್ಯಪಡಿಸಲಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ದೃಢತೆಯು ಶೋಚನೀಯ ಪ್ರಮಾಣದ ಕೊರತೆಯನ್ನು ಹೊಂದಿರುತ್ತದೆ. ಪಕ್ಷಕಾರನು 32 ವರ್ಷಗಳ ತರುವಾಯ ಎಚ್ಚರಗೊಂಡು, ಕಾನೂನು ಸಮರವನ್ನು ಆರಂಭಿಸಿರುತ್ತಾರೆ. ಅತಿಯಾದ ಹಾಗೂ ಮಿತಿಮೀರಿದ ವಿಳಂಬಕ್ಕೆ ಸಂಬಂಧಿಸಿದಂತೆ ವಿವರಣೆ ಕೋರಲು ನಿರುಪಾಧಿಕವಾಗಿ ಯಾವುದೇ ಸಮರ್ಥನೀಯ ಕಾರಣವೇ ಇರುವುದಿಲ್ಲ. ಹಾಗಾಗಿ, ಈ ಆಧಾರದ ಮೇಲೂ ಸಹ, ರಿಟ್ ಅರ್ಜಿಯನ್ನು ಅಂಗೀಕರಿಸಬೇಕಾಗಿರುತ್ತದೆ.

20. ಮೇಲಿನ ಚರ್ಚೆಯ ಹಿನ್ನೆಲೆಯಲ್ಲೂ, ಈ ನ್ಯಾಯಾಲಯವು, ಪ್ರಸ್ತುತ ರಿಟ್ ಅರ್ಜಿಯಲ್ಲಿರುವ ಗುಣಾರ್ಹತೆಗಳನ್ನು ಕಂಡುಕೊಂಡಿರುತ್ತದೆ. ತದನುಸಾರವಾಗಿ, ಇದನ್ನು ಅಂಗೀಕರಿಸಲಾಗಿರುತ್ತದೆ. 1 ಮತ್ತು 2ನೇ ಪ್ರತ್ಯರ್ಜಿದಾರರು ಹೊರಡಿಸಿದ ಆದೇಶಗಳಾದ ಅನುಬಂಧ–ಎ ಹಾಗೂ ಬಿ ಗಳನ್ನು ರದ್ದುಪಡಿಸಲಾಗಿರುತ್ತದೆ.

ವ್ಯಾಜ್ಯದಲ್ಲಿ ಒಳಗೊಂಡಿರುವ ಕಾನೂನು ಹಾಗೂ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

---